Re.No. D. 221

# भारत का राजपत्र
# The Gazette of India
# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

**भाग IX** अनुभाग 1
**PART IX SECTION 1**
ಭಾಗ **IX** ವಿಭಾಗ 1

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | |
|---|---|---|
| सं 1, नई दिल्ली, बुधवार, 18 मई, 2022 | वैशाख 18, 1944 (शक) | खंड. 52 |
| No.1. New Delhi. Wednesday. May 18. 2022 | Vaishaka 18. 1944 (Saka) | Vol. 52 |
| ನಂ.1. ನವದೆಹಲಿ. ಬುಧವಾರ. ಮೇ 18. 2022 | ವೈಶಾಖ 18. 1944 (ಶಕ) | ಸಂಪುಟ. 52 |


**Ministry of Law and Justice**
(Legislative Department)
New Delhi, 18th May, 2022

ಕಾನೂನು ಮತ್ತು ನ್ಯಾಯ ಮಂತ್ರಾಲಯ
(ವಿಧಾಯೀ ಇಲಾಖೆ)
**ನವದೆಹಲಿ, 18ನೇ ಮೇ, 2022**

The Translation in Kannada of the following Act, namely:- (1) THE PASSPORT (ENTRY INTO INDIA) ACT, 1920 (ACT NO. 34 OF 1920) (2) THE PREVENTION AND CONTROL OF INFECTIOUS AND CONTAGIOUS DISEASES IN ANIMALS ACT, 2009 (ACT NO. 27 OF 2009) (3) THE LEGAL METROLOGY ACT, 2009 (ACT NO. 1 OF 2010) (4) THE CLINICAL ESTABLISHMENTS (REGISTRATION AND REGULATION) ACT, 2010 (ACT NO. 23 OF 2010) (5) THE LAND PORTS AUTHORITY OF INDIA ACT, 2010 (ACT NO. 31 OF 2010) (6) THE CENTRAL EDUCATIONAL INSTITUTIONS (RESERVATION IN TEACHERS' CADRE) ACT, 2019 (ACT NO. 10 OF 2019) (7) THE MUSLIM WOMEN (PROTECTION OF RIGHTS ON MARRIAGE) ACT, 2019 (ACT NO. 20 OF 2019) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:- (1) ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 (1920ರ ಅಧಿನಿಯಮ ಸಂಖ್ಯೆ 34) (2) ಪಶು ಸೋಂಕು ರೋಗಗಳ ಮತ್ತು ಸಾಂಕ್ರಾಮಿಕ ರೋಗಗಳ ಪ್ರತಿಬಂಧ ಮತ್ತು ನಿಯಂತ್ರಣ ಅಧಿನಿಯಮ, 2009 (2009 ರ ಅಧಿನಿಯಮ ಸಂಖ್ಯೆ 27) (3) ಕಾನೂನು ಮಾಪನ ವಿಜ್ಞಾನ ಅಧಿನಿಯಮ, 2009 (2010ರ ಅಧಿನಿಯಮ ಸಂಖ್ಯೆ 1) (4) ಚಿಕಿತ್ಸಾ ಕಾರ್ಯಸಂಸ್ಥೆಗಳ (ನೋಂದಣಿ ಮತ್ತು ವಿನಿಯಮ) ಅಧಿನಿಯಮ, 2010 (2010ರ ಅಧಿನಿಯಮ ಸಂಖ್ಯೆ 23) (5) ಭಾರತ ಭೂ ಬಂದರುಗಳ ಪ್ರಾಧಿಕಾರ ಅಧಿನಿಯಮ, 2010 (2010ರ ಅಧಿನಿಯಮ ಸಂಖ್ಯೆ 31) (6) ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ (ಶಿಕ್ಷಕ ವೃಂದದಲ್ಲಿ ಮೀಸಲಾತಿ) ಅಧಿನಿಯಮ, 2019 (2019 ರ ಅಧಿನಿಯಮ ಸಂಖ್ಯೆ 10) (7) ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019 (2019 ರ ಅಧಿನಿಯಮ ಸಂಖ್ಯೆ 20) – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ಕಾನೂನು ಮಾಪನ ವಿಜ್ಞಾನ ಅಧಿನಿಯಮ, 2009

## (2010ರ ಅಧಿನಿಯಮ ಸಂಖ್ಯೆ 1)

[13ನೇ ಜನವರಿ, 2010.]

ತೂಕದ ಬಟ್ಟುಗಳ ಮತ್ತು ಅಳತೆಯ ಮಾಪಕಗಳ ಪ್ರಮಾಣಗಳನ್ನು ನಿಗದಿಪಡಿಸುವುದಕ್ಕಾಗಿ ಮತ್ತು ಜಾರಿಗೊಳಿಸುವುದಕ್ಕಾಗಿ ತೂಕದ ಬಟ್ಟುಗಳ, ಅಳತೆಯ ಮಾಪಕಗಳ ಮತ್ತು ಯಾವ ಇತರ ಸರಕುಗಳನ್ನು ತೂಕ ಮಾಡಿ, ಅಳತೆ ಮಾಡಿ ಅಥವಾ ಸಂಖ್ಯೆಯನ್ನು ಎಣಿಕೆ ಮಾಡಿ ಮಾರಾಟ ಮಾಡಲಾಗುತ್ತದೆಯೋ ಆ ಇತರ ವಸ್ತುಗಳ ವ್ಯಾಪಾರವನ್ನು ಮತ್ತು ವಾಣಿಜ್ಯವನ್ನು ವಿನಿಯಮಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಅಧಿನಿಯಮ.

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

### ಅಧ್ಯಾಯ I

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕಾನೂನು ಮಾಪನ ವಿಜ್ಞಾನ ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ, ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. **ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) **"ನಿಯಂತ್ರಕ"** ಎಂದರೆ, 14ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕಾನೂನು ಮಾಪನ ವಿಜ್ಞಾನ ನಿಯಂತ್ರಕ;

(ಬಿ) ಯಾವುದೇ ತೂಕದ ಬಟ್ಟಿಗೆ ಅಥವಾ ಅಳತೆ ಮಾಪಕಕ್ಕೆ ಸಂಬಂಧಿಸಿದಂತೆ, **"ಡೀಲರ್"** ಎಂದರೆ, ಯಾವ ವ್ಯಕ್ತಿಯು, ನಗದಿಗಾಗಲಿ ಅಥವಾ ಮುಂದೂಡಿದ ಸಂದಾಯಕ್ಕಾಗಿಯಾಗಲಿ, ಅಥವಾ ಕಮೀಷನ್‌ಗಾಗಿಯಾಗಲಿ, ಪರಿಶ್ರಮಕ್ಕಾಗಿಯಾಗಲಿ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿಯಾಗಲಿ, ಯಾವುದೇ ಅಂಥ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಖರೀದಿ ಮಾಡುವ, ಮಾರಾಟ ಮಾಡುವ, ಸರಬರಾಜು ಮಾಡುವ ಅಥವಾ ವಿತರಣೆ ಮಾಡುವ ವ್ಯವಹಾರವನ್ನು, ನೇರವಾಗಿ ಅಥವಾ ಅನ್ಯಥಾ ನಡೆಸುತ್ತಿರುವನೋ ಆ ವ್ಯಕ್ತಿ ಮತ್ತು ಇದರಲ್ಲಿ ಕಮಿಷನ್ ಏಜೆಂಟನು, ಆಮದುದಾರನು, ಯಾವ ವ್ಯಕ್ತಿಯು ತಾನು ತಯಾರಿಸಿದ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಡೀಲರ್ ಅಲ್ಲದ ಇತರ ಯಾರೇ ವ್ಯಕ್ತಿಗೆ ಮಾರಾಟ ಮಾಡುತ್ತಾನೋ, ಸರಬರಾಜು ಮಾಡುತ್ತಾನೋ, ವಿತರಣೆ ಮಾಡುತ್ತಾನೋ ಅಥವಾ ಅನ್ಯಥಾ ತಲುಪಿಸುತ್ತಾನೋ ಆ ತಯಾರಕನು ಒಳಗೊಳ್ಳುತ್ತಾನೆ;

(ಸಿ) **"ನಿರ್ದೇಶಕ"** ಎಂದರೆ, 13ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕಾನೂನು ಮಾಪನ ವಿಜ್ಞಾನ ನಿರ್ದೇಶಕ;

---

*ಮಾರ್ಚ್ 01, 2011 ರಂದು ಜಾರಿಗೆ ಬಂದಿದೆ. ಅಧಿಸೂಚನೆ ಸಂಖ್ಯೆ ಎಸ್.ಒ 1 (ಇ), ದಿನಾಂಕ: ಡಿಸೆಂಬರ್ 31, 2010. ಭಾರತ ವಿಶೇಷ ರಾಜಪತ್ರ, ಭಾಗ-II, ವಿಭಾಗ 3 (ii) ನೋಡಿ.

(ಡಿ) ವ್ಯಾಕರಣ ವ್ಯತ್ಯಾಸಗಳೊಂದಿಗೆ ಮತ್ತು ಸಜಾತೀಯ ಪದಾವಳಿಗಳೊಂದಿಗೆ, "ರಫ್ತು" ಎಂದರೆ, ಭಾರತದ ಹೊರಕ್ಕೆ ಭಾರತದಿಂದ ತೆಗೆದುಕೊಂಡು ಹೋಗುವುದು;

(ಇ) ವ್ಯಾಕರಣ ವ್ಯತ್ಯಾಸಗಳೊಂದಿಗೆ ಮತ್ತು ಸಜಾತೀಯ ಪದಾವಳಿಗಳೊಂದಿಗೆ, "ಆಮದು" ಎಂದರೆ, ಭಾರತದ ಹೊರಗಿನಿಂದ ಭಾರತದ ಒಳಗೆ ತರುವುದು;

(ಎಫ್) "ಲೇಬಲ್" ಎಂದರೆ, ಮುಂಚಿತವಾಗಿ ಪ್ಯಾಕು ಮಾಡಿದ ಯಾವುದೇ ಸರಕು ಸಾಮಗ್ರಿಗಳ ಮೇಲೆ ಅಂಟಿಸಿರುವ ಅಥವಾ ಅವುಗಳ ಮೇಲೆ ಕಂಡುಬರುವ ಲಿಖಿತದಲ್ಲಿರುವ, ಗುರುತು ಮಾಡಿದ, ಸ್ಟಾಂಪು ಹಾಕಿದ ಮುದ್ರಿತವಾದ ಅಥವಾ ಗ್ರಾಫಿಕ್ ರೂಪದಲ್ಲಿರುವ ಯಾವುದೇ ವಿಷಯ;

(ಜಿ) "ಕಾನೂನು ಮಾಪನ ವಿಜ್ಞಾನ" ಎಂದರೆ, ಯಾವ ಕಡ್ಡಾಯ ತಾಂತ್ರಿಕ ಮತ್ತು ಕಾನೂನು ಅಗತ್ಯತೆಗಳಿಗೆ ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಭದ್ರತೆಯ ಮತ್ತು ನಿಖರತೆಯ ದೃಷ್ಟಿಯಿಂದ ಸಾರ್ವಜನಿಕ ಖಾತರಿಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶ ಇದೆಯೋ ಆ ಕಡ್ಡಾಯ ತಾಂತ್ರಿಕ ಮತ್ತು ಕಾನೂನು ಅಗತ್ಯತೆಗಳ ಸಂಬಂಧದಲ್ಲಿ ಮಾಪನ ವಿಜ್ಞಾನದ ಯಾವ ಭಾಗದಲ್ಲಿ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಯೂನಿಟ್‌ಗಳನ್ನು ತೂಕ ಮಾಡುವ ಅಥವಾ ಅಳತೆ ಮಾಡುವ ವಿಧಾನಗಳ ಮತ್ತು ತೂಕ ಮಾಡುವ ಮತ್ತು ಅಳತೆ ಮಾಡುವ ಸಾಧನ ಸಲಕರಣೆಗಳ ಬಗ್ಗೆ ನಿರೂಪಿಸಲಾಗಿದೆಯೋ ಆ ಮಾಪನ ವಿಜ್ಞಾನದ ಭಾಗ;

(ಹೆಚ್) "ಕಾನೂನು ಮಾಪನ ವಿಜ್ಞಾನ ಅಧಿಕಾರಿ" ಎಂದರೆ, 13ನೇ ಮತ್ತು 14ನೇ ಪ್ರಕರಣದ ಮೇರೆಗೆ ನೇಮಕಗೊಂಡ ಹೆಚ್ಚುವರಿ ನಿರ್ದೇಶಕ, ಹೆಚ್ಚುವರಿ ನಿಯಂತ್ರಕ, ಜಂಟಿ ನಿರ್ದೇಶಕ, ಜಂಟಿ ನಿಯಂತ್ರಕ, ಉಪ ನಿರ್ದೇಶಕ, ಉಪ ನಿಯಂತ್ರಕ, ಸಹಾಯಕ ನಿರ್ದೇಶಕ, ಸಹಾಯಕ ನಿಯಂತ್ರಕ ಮತ್ತು ಇನ್ಸ್‌ಪೆಕ್ಟರ್;

(ಐ) ಯಾವುದೇ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಸಂಬಂಧದಲ್ಲಿ 'ತಯಾರಕ' ಎಂದರೆ, ಯಾವ ವ್ಯಕ್ತಿಯು–

(i) ತೂಕದ ಬಟ್ಟುಗಳನ್ನು ಮಾಡುವ ಅಥವಾ ಅಳತೆಯ ಮಾಪಕಗಳನ್ನು ತಯಾರಿಸುತ್ತಾನೋ;

(ii) ಅಂಥ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಒಂದು ಅಥವಾ ಹೆಚ್ಚು ಭಾಗಗಳನ್ನು ತಯಾರಿಸುತ್ತಾನೋ ಮತ್ತು ಅಂಥ ತೂಕದ ಬಟ್ಟುಗಳ ಅಥವಾ ಅಳತೆಯ ಮಾಪಕಗಳ ಇತರ ಭಾಗಗಳನ್ನು ಪಡೆದುಕೊಳ್ಳುತ್ತಾನೋ ಮತ್ತು ಆ ಭಾಗಗಳನ್ನು ಜೋಡಿಸಿ ಅಂತಿಮವಾಗಿ ತಯಾರಿಸಿದ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕವನ್ನು ತಾನೇ ತಯಾರಿಸಿದ್ದೆಂದು ಅಥವಾ ಸಂದರ್ಭಾನುಸಾರ ಅದು ತಯಾರಿಸಿದ್ದೆಂದು ಕ್ಲೇಮು ಮಾಡುತ್ತಾನೋ;

(iii) ಅಂಥ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಯಾವ ಭಾಗವನ್ನು ತಯಾರಿಸುವುದಿಲ್ಲವೋ ಆದರೆ ಇತರರು ತಯಾರಿಸಿದ ಆ ಭಾಗಗಳನ್ನು ಜೋಡಿಸುತ್ತಾನೋ ಮತ್ತು ಅಂತಿಮವಾಗಿ ಸಿದ್ಧಪಡಿಸಿದ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ತಾನೇ ತಯಾರಿಸಿದ್ದೆಂದು ಅಥವಾ ಸಂದರ್ಭಾನುಸಾರ ಅದು ತಯಾರಿಸಿದ್ದೆಂದು ಕ್ಲೇಮು ಮಾಡುತ್ತಾನೋ;

(iv) ಯಾರೇ ಇತರ ವ್ಯಕ್ತಿಯು ಮಾಡಿದ ಅಥವಾ ತಯಾರಿಸಿ ಪೂರ್ಣಗೊಳಿಸಿದ ಯಾವುದೇ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮೇಲೆ ತನ್ನದೇ ಗುರುತನ್ನು ಹಾಕುತ್ತಾನೋ ಅಥವಾ ಹಾಕಿಸುತ್ತಾನೋ ಮತ್ತು ಅಂಥ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ತಾನೇ ಅಥವಾ ಸಂದರ್ಭಾನುಸಾರ ಅದು ಮಾಡಿದ ಅಥವಾ ತಯಾರಿಸಿದ ಉತ್ಪನ್ನವೆಂದು ಕ್ಲೇಮು ಮಾಡುತ್ತಾನೋ

– ಆ ವ್ಯಕ್ತಿ;

(ಜೆ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಕೆ) "ಸಂರಕ್ಷಣೆ" ಎಂದರೆ, ಮಾನವನ ಅಥವಾ ಪ್ರಾಣಿಯ ಒಳಿತನ್ನು ಕಾಪಾಡುವುದಕ್ಕಾಗಿ ಅಥವಾ ಯಾವುದೇ ಸರಕು ಸಾಮಗ್ರಿಯನ್ನು, ಸಸ್ಯವರ್ಗವನ್ನು ಅಥವಾ ವಸ್ತುವನ್ನು ಪ್ರತ್ಯೇಕವಾಗಿಯಾಗಲಿ ಅಥವಾ ಸಾಮೂಹಿಕವಾಗಿಯಾಗಲಿ ಸಂರಕ್ಷಿಸುವುದಕ್ಕಾಗಿ ಯಾವ ಕ್ರಮವನ್ನು ಕೈಗೊಳ್ಳುವುದು ಅಗತ್ಯವಿದೆಯೋ ಆ ಕ್ರಮವನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ಯಾವುದೇ ತೂಕದ ಬಟ್ಟಿನಿಂದ ಅಥವಾ ಅಳತೆಯ ಮಾಪಕದಿಂದ ಕಂಡುಬರುವ ಪ್ರಮಾಣ ಸಂಖ್ಯೆಯ ಬಳಕೆ;

(ಎಲ್) "ಮುಂಚಿತವಾಗಿ ಪ್ಯಾಕ್ ಮಾಡಿದ ಸರಕು ಸಾಮಗ್ರಿ" ಎಂದರೆ, ಯಾವ ಸರಕು ಸಾಮಗ್ರಿಯನ್ನು ಖರೀದಿದಾರನು ಉಪಸ್ಥಿತನಿಲ್ಲದಿರುವಾಗ ಯಾವುದೇ ಸ್ವರೂಪದ ಪ್ಯಾಕೇಜಿನಲ್ಲಿ ಅದನ್ನು ಮೊಹರು ಮಾಡಿರಲಿ ಅಥವಾ ಮೊಹರು ಮಾಡಿಲ್ಲದಿರಲಿ, ಪ್ಯಾಕ್ ಮಾಡಿರುವ ಆ ಸರಕು ಸಾಮಗ್ರಿ, ಹಾಗೆ ಮಾಡಿದ್ದರಿಂದ ಅದರಲ್ಲಿ ಒಳಗೊಂಡಿರುವ ಉತ್ಪನ್ನವು ಪೂರ್ವನಿರ್ಧಾರಿತ ಪ್ರಮಾಣದ್ದಾಗಿರುತ್ತದೆ;

(ಎಂ) "ವ್ಯಕ್ತಿ" ಎಂಬುದರಲ್ಲಿ,–

(i) ಹಿಂದೂ ಅವಿಭಕ್ತ ಕುಟುಂಬ;

(ii) ಪ್ರತಿಯೊಂದು ಇಲಾಖೆ ಅಥವಾ ಕಚೇರಿ;

(iii) ಸರ್ಕಾರವು ಸ್ಥಾಪಿಸಿದ ಅಥವಾ ರಚಿಸಿದ ಪ್ರತಿಯೊಂದು ಸಂಸ್ಥೆ;

(iv) ಭಾರತದ ರಾಜ್ಯಕ್ಷೇತ್ರದ ಒಳಗಿರುವ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರ;

(v) ಕಂಪನಿ, ಫರ್ಮು ಮತ್ತು ವ್ಯಕ್ತಿಗಳ ಸಂಘ;

(vi) ಅಧಿನಿಯಮದ ಮೇರೆಗೆ ರಚಿತವಾದ ಟ್ರಸ್ಟು;

(vii) ಅಧಿನಿಯಮದ ಮೇರೆಗೆ ರಚಿತವಾದ ಪ್ರತಿಯೊಂದು ಸಹಕಾರಿ ಸಂಘ;

(viii) ಸಂಘಗಳ ನೋಂದಣಿ ಅಧಿನಿಯಮ, 1860 (1860 ರ 21) ರ ಮೇರೆಗೆ ನೋಂದಾಯಿತವಾದ ಪ್ರತಿಯೊಂದು ಇತರ ಸಂಘ

– ಇವುಗಳು ಒಳಗೊಳ್ಳುತ್ತವೆ.

(ಎನ್) "ಆವರಣ" ಎಂಬುದರಲ್ಲಿ–

(i) ಯಾವ ಸ್ಥಳದಲ್ಲಿ ಒಬ್ಬ ವ್ಯಕ್ತಿಯು, ಸ್ವತಃ ತಾನೇ ಅಥವಾ ಅಂಥ ಆವರಣದಲ್ಲಿ ವ್ಯವಹಾರವನ್ನು ನಡೆಸುವ ಯಾರೇ ವ್ಯಕ್ತಿಯೂ ಒಳಗೊಂಡಂತೆ ಯಾವುದೇ ಹೆಸರಿನಿಂದ ಕರೆಯಲಾಗುವ ಏಜೆಂಟ್‌ನ ಮೂಲಕವಾಗಲಿ ಯಾವುದೇ ವ್ಯವಹಾರವನ್ನು, ಕೈಗಾರಿಕೆಯನ್ನು, ಉತ್ಪಾದನೆಯನ್ನು ಅಥವಾ ವ್ಯಾಪಾರ ವ್ಯವಹಾರವನ್ನು ನಡೆಸುತ್ತಾನೋ ಆ ಸ್ಥಳ;

(ii) ಉಗ್ರಾಣ, ಗೋದಾಮು ಅಥವಾ ಯಾವ ಸ್ಥಳದಲ್ಲಿ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಅಥವಾ ಇತರ ಸರಕುಗಳನ್ನು ದಾಸ್ತಾನು ಮಾಡಲಾಗಿದೆಯೋ ಅಥವಾ ಪ್ರದರ್ಶಿಸಲಾಗಿದೆಯೋ ಆ ಇತರ ಸ್ಥಳ;

(iii) ಯಾವ ಸ್ಥಳದಲ್ಲಿ ಯಾವುದೇ ವ್ಯಾಪಾರಕ್ಕೆ ಅಥವಾ ವಹಿವಾಟಿಗೆ ಸಂಬಂಧಿಸಿದ ಯಾವುವೇ ಲೆಕ್ಕದ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಇಡಲಾಗಿದೆಯೋ ಆ ಸ್ಥಳ;

(iv) ವಾಸದ ಮನೆಯ ಯಾವುದೇ ಭಾಗವನ್ನು, ಯಾವುದೇ ವ್ಯವಹಾರವನ್ನು, ಕೈಗಾರಿಕೆಯನ್ನು, ಉತ್ಪಾದನೆಯನ್ನು, ಅಥವಾ ವ್ಯಾಪಾರವನ್ನು ನಡೆಸುವ ಉದ್ದೇಶಕ್ಕಾಗಿ ಬಳಸುತ್ತಿದ್ದರೆ ಆ ವಾಸದ ಮನೆ;

(v) ಯಾವ ವಾಹನ, ನೌಕೆ ಅಥವಾ ಸಂಚಾರ ಸಾಧನದ ನೆರವಿನಿಂದ ಯಾವುದೇ ವಹಿವಾಟನ್ನು ಅಥವಾ ವ್ಯವಹಾರವನ್ನು ನಡೆಸಲಾಗುತ್ತಿದೆಯೋ ಆ ವಾಹನ ಅಥವಾ ನೌಕೆ ಅಥವಾ ಇತರ ಸಂಚಾರ ಸಾಧನ

– ಒಳಗೊಳ್ಳುತ್ತದೆ;

(ಒ) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಪಿ) "ದುರಸ್ತಿದಾರ" ಎಂದರೆ, ಯಾವ ವ್ಯಕ್ತಿಯು ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ದುರಸ್ತಿ ಮಾಡುತ್ತಾನೋ ಆ ವ್ಯಕ್ತಿ ಮತ್ತು ಯಾವ ವ್ಯಕ್ತಿಯು, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಿರುವ ಪ್ರಮಾಣಗಳಿಗೆ ಅಂತಹ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಅನುರೂಪವಾಗಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಸರಿಹೊಂದಿಸುತ್ತಾನೋ, ಸ್ವಚ್ಛಗೊಳಿಸುತ್ತಾನೋ, ಅದಕ್ಕೆ ಕೀಲೆಣ್ಣೆ ಹಾಕುತ್ತಾನೋ ಅಥವಾ ಪೇಂಟ್ ಮಾಡುತ್ತಾನೋ ಅಥವಾ ಅಂತಹ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಸುಸ್ಥಿತಿಯಲ್ಲಿಡಲು ಯಾವುದೇ ಇತರ ಸೇವೆಯನ್ನು ಒದಗಿಸುತ್ತಾನೋ ಆ ವ್ಯಕ್ತಿಯು ಒಳಗೊಳ್ಳುತ್ತಾನೆ;

(ಕ್ಯೂ) ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಪಟ್ಟಂತೆ "ರಾಜ್ಯ ಸರ್ಕಾರ" ಎಂದರೆ, ಅದರ ಆಡಳಿತಗಾರ;

(ಆರ್) ವ್ಯಾಕರಣ ವ್ಯತ್ಯಾಸಗಳೊಂದಿಗೆ ಮತ್ತು ಸಜಾತೀಯ ಪದಾವಳಿಗಳೊಂದಿಗೆ, "ಮಾರಾಟ" ಎಂದರೆ, ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ, ಯಾವುದೇ ತೂಕದ, ಅಳತೆಯ ಸ್ವತ್ತನ್ನು ಅಥವಾ ಇತರ ಸರಕುಗಳನ್ನು ನಗದಿಗಾಗಿ ಅಥವಾ ಮುಂದೂಡಿದ ಸಂದಾಯಕ್ಕಾಗಿ ಅಥವಾ ಯಾವುದೇ ಇತರ ಮೌಲ್ಯದ ಪ್ರತಿಫಲಕ್ಕಾಗಿ ವರ್ಗಾಯಿಸುವುದು ಮತ್ತು ಇದರಲ್ಲಿ ಕಂತು ಖರೀದಿ ಪದ್ಧತಿ ಅನ್ವಯ ಅಥವಾ ಕಂತುಗಳ ರೂಪದಲ್ಲಿ ಹಣ ಸಂದಾಯ ಮಾಡುವ ಇತರ ಯಾವುದೇ ಪದ್ಧತಿ ಅನ್ವಯ ಯಾವುದೇ ತೂಕದ ಬಟ್ಟನ್ನು, ಅಳತೆಯ ಮಾಪಕವನ್ನು ಅಥವಾ ಇತರ ಸರಕುಗಳನ್ನು ವರ್ಗಾವಣೆ ಮಾಡುವುದು ಒಳಗೊಳ್ಳುತ್ತದೆ. ಆದರೆ ಅಂಥ ತೂಕದ ಬಟ್ಟನ್ನು, ಅಳತೆಯ ಮಾಪಕವನ್ನು ಅಥವಾ ಇತರ ಸರಕುಗಳನ್ನು ಅಡಮಾನ ಮಾಡುವುದು ಅಥವಾ ಆಧಾರ ಮಾಡುವುದು ಅಥವಾ ಅವುಗಳನ್ನು ಮೇಲಿನ ಋಣಭಾರಕ್ಕೆ ಅಳವಡಿಸುವುದು ಅಥವಾ ಒತ್ತೆಯಿಡುವುದು ಒಳಗೊಳ್ಳುವುದಿಲ್ಲ;

(ಎಸ್) "ಮೊಹರು" ಎಂದರೆ, ಯಾವ ಸಾಧನದಿಂದ ಅಥವಾ ಪ್ರಕ್ರಿಯೆಯಿಂದ ಸ್ಟಾಂಪನ್ನು ಹಾಕಲಾಗುತ್ತದೆಯೋ ಆ ಸಾಧನ ಅಥವಾ ಪ್ರಕ್ರಿಯೆ ಮತ್ತು ಯಾವುದೇ ಸ್ಟಾಂಪು ಪೂರ್ಣವಾಗಿ ಮಾಡುವಂತೆ ಮಾಡಲು ಬಳಸಲಾಗುವ ತಂತಿಯನ್ನು ಅಥವಾ ಉಪಸಾಧನವನ್ನು ಅದು ಒಳಗೊಳ್ಳುತ್ತದೆ;

(ಟಿ) "ಸ್ಟಾಂಪ್" ಎಂದರೆ–

(i) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿರ್ದಿಷ್ಟಪಡಿಸಿದ ಪ್ರಮಾಣಕ್ಕೆ ಅಂಥ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಅನುರೂಪವಾಗಿದೆ ಎಂದು ಪ್ರಮಾಣೀಕರಿಸುವ; ಅಥವಾ

(ii) ಯಾವುದೇ ಅಂಥ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿರ್ದಿಷ್ಟಪಡಿಸಿದ ಪ್ರಮಾಣಗಳಿಗೆ ಅನುರೂಪವಾಗಿದೆ ಎಂದು ಪ್ರಮಾಣೀಕರಿಸಿ, ಅದರ ಮೇಲೆ ಈ ಹಿಂದೆ ಮಾಡಿದ ಯಾವುದೇ ಗುರುತನ್ನು ಅಳಿಸಿಹಾಕಲಾಗಿದೆ ಎಂದು ಸೂಚಿಸುವ

– ದೃಷ್ಟಿಯಿಂದ, ಯಾವುದೇ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಸಂಬಂಧಿಸಿದಂತೆ, ಅಚ್ಚೊತ್ತುವ, ಎರಕಹೊಯ್ಯುವ, ಕೆತ್ತುವ, ಕೊರೆಯುವ, ಕಾಯಿಸಿ ಒತ್ತುವ, ಪ್ರಿಸ್ಪ್ರೆಸ್ಡ್ ಕಾಗದದಿಂದ ಮೊಹರನ್ನು ಹಾಕುವ ಮೂಲಕ ಅಥವಾ ಯಾವುದೇ ಇತರ ಪ್ರಕ್ರಿಯೆಯ ಮೂಲಕ ಮಾಡಿದ ಗುರುತು;

(ಯು) "ವಹಿವಾಟು" ಎಂದರೆ:–

(i) ಮಾರಾಟಕ್ಕಾಗಿ ಆಗಲಿ, ಖರೀದಿಗಾಗಿ ಆಗಲಿ, ವಿನಿಯಮಕ್ಕಾಗಿ ಆಗಲಿ ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ ಆಗಲಿ ಮಾಡಿಕೊಂಡ ಯಾವುದೇ ಕರಾರು; ಅಥವಾ

(ii) ಯಾವುದೇ ಸ್ವಾಮ್ಯ ಶುಲ್ಕದ, ದಾರಿ ಸುಂಕದ, ಜಕಾತಿಯ ಅಥವಾ ಇತರ ಬಾಕಿಗಳ ಯಾವುದೇ ನಿರ್ಧರಣೆ; ಅಥವಾ

(iii) ಮಾಡಿದ ಯಾವುದೇ ಕೆಲಸದ, ಕೊಡಬೇಕಾದ ಮಜೂರಿಯ ಅಥವಾ ಸಲ್ಲಿಸಿದ ಸೇವೆಗಳ ನಿರ್ಧರಣೆ;

(ವಿ) ವ್ಯಾಕರಣ ವ್ಯತ್ಯಾಸಗಳೊಂದಿಗೆ ಮತ್ತು ಸಜಾತೀಯ ಪದಾವಳಿಗಳೊಂದಿಗೆ "ಸತ್ಯಾಪನೆ"ಯು ಯಾವುದೇ ತೂಕದ ಬಟ್ಟಿಗೆ ಅಥವಾ ಅಳತೆ ಮಾಪನಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಿದ ಪ್ರಮಾಣಗಳಿಗೆ ಅಂಥ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕವು ಅನುರೂಪವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಅಂಥ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಹೋಲಿಸಿನೋಡುವ, ಪರಿಶೀಲಿಸುವ, ಪರೀಕ್ಷಿಸುವ ಅಥವಾ ಸರಿಹೊಂದಿಸುವ ಪ್ರಕ್ರಿಯೆಯನ್ನು ಮತ್ತು ಪುನರ್ ಸತ್ಯಾಪನೆಯನ್ನು ಮತ್ತು ಮಾಪನಾಂಕ ಮಾಡುವುದನ್ನು ಸಹ ಅದು ಒಳಗೊಳ್ಳುತ್ತದೆ;

(ಡಬ್ಲ್ಯೂ) **"ತೂಕದ ಬಟ್ಟು ಅಥವಾ ಅಳತೆ ಮಾಪಕ"** ಎಂದರೆ, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಿದ ತೂಕದ ಬಟ್ಟು ಅಥವಾ ಅಳತೆಯ ಮಾಪಕ ಮತ್ತು ಇದು ತೂಕ ಮಾಡುವ ಅಥವಾ ಅಳತೆಮಾಡುವ ಸಾಧನ ಸಲಕರಣೆಯನ್ನು ಒಳಗೊಳ್ಳುತ್ತದೆ.

**3. ಈ ಅಧಿನಿಯಮದ ಉಪಬಂಧಗಳು ಇತರ ಯಾವುದೇ ಕಾನೂನಿನ ಉಪಬಂಧಗಳಿಗಿಂತ ಹೆಚ್ಚಿನ ಪರಿಣಾಮವನ್ನು ಹೊಂದಿರುವುದು.**- ಈ ಅಧಿನಿಯಮದ ಉಪಬಂಧಗಳು, ಈ ಅಧಿನಿಯಮ ಅಲ್ಲದ ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ಈ ಅಧಿನಿಯಮದ ಹೊರತಾಗಿ ಯಾವುದೇ ಅಧಿನಿಯಮಿತಿಯ ಬಲದಿಂದ ಪರಿಣಾಮ ಹೊಂದಿರುವ ಯಾವುದೇ ಲಿಖಿತದಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾದುದು ಏನೇ ಒಳಗೊಂಡಿದ್ದರೂ, ಪರಿಣಾಮಕಾರಿಯಾಗತಕ್ಕದ್ದು.

## ಅಧ್ಯಾಯ II

## ಪ್ರಮಾಣ ತೂಕದ ಬಟ್ಟುಗಳು ಮತ್ತು ಅಳತೆಯ ಮಾಪಕಗಳು

**4. ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಯೂನಿಟ್‌ಗಳು ಮೆಟ್ರಿಕ್ ಪದ್ಧತಿಯನ್ನು ಆಧರಿಸಿರಬೇಕು.**- ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಪ್ರತಿಯೊಂದು ಯೂನಿಟ್, ಅಂತರರಾಷ್ಟ್ರೀಯ ಯೂನಿಟ್‌ಗಳ ಪದ್ಧತಿಯ ಮೇಲೆ ಆಧಾರಿತವಾಗಿರುವ ಮೆಟ್ರಿಕ್ ಪದ್ಧತಿಗೆ ಅನುಗುಣವಾಗಿರತಕ್ಕದ್ದು.

**5. ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಬೇಸ್ ಯೂನಿಟ್.**- (1) ಈ ಮುಂದಿನವುಗಳ ಬೇಸ್ ಯೂನಿಟ್ ಎಂದರೆ-

(i) ಉದ್ದದ ಬೇಸ್ ಯೂನಿಟ್ ಅನ್ನು ಮೀಟರ್‌ನಲ್ಲಿ ಹೇಳತಕ್ಕದ್ದು;

(ii) ದ್ರವ್ಯಮಾನದ ಬೇಸ್ ಯೂನಿಟ್ ಅನ್ನು ಕಿಲೋಗ್ರಾಂನಲ್ಲಿ ಹೇಳತಕ್ಕದ್ದು;

(iii) ಸಮಯದ ಬೇಸ್ ಯೂನಿಟ್ ಅನ್ನು ಸೆಕೆಂಡಿನಲ್ಲಿ ಹೇಳತಕ್ಕದ್ದು;

(iv) ವಿದ್ಯುತ್ ಪ್ರವಹನದ ಬೇಸ್ ಯೂನಿಟ್ ಅನ್ನು ಅಂಪಿಯರ್‌ನಲ್ಲಿ ಹೇಳತಕ್ಕದ್ದು;

(v) ಉಷ್ಣೋತ್ಪಾದಕ ತಾಪಮಾನದ ಬೇಸ್ ಯೂನಿಟ್ ಅನ್ನು ಕೆಲ್ವಿನ್‌ನಲ್ಲಿ ಹೇಳತಕ್ಕದ್ದು;

(vi) ದ್ಯುತಿ ತೀಕ್ಷ್ಣತೆಯ ಬೇಸ್ ಯೂನಿಟ್ ಅನ್ನು ಕ್ಯಾಂಡೀಲನಲ್ಲಿ ಹೇಳತಕ್ಕದ್ದು; ಮತ್ತು

(vii) ಘನಮೂಲದ ಮೊತ್ತದ ಬೇಸ್ ಯೂನಿಟ್ ಅನ್ನು ಮೋಲ್‌ನಲ್ಲಿ ಹೇಳತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ನಮೂದಿಸಿರುವ ಬೇಸ್ ಯೂನಿಟ್‌ಗಳ ವಿಶಿಷ್ಟ ವಿವರಗಳು, ನಿಷ್ಪನ್ನ ಬೇಸ್ ಯೂನಿಟ್‌ಗಳು ಮತ್ತು ಇತರ ಬೇಸ್ ಯೂನಿಟ್‌ಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**6. ಸಂಖ್ಯಾಲೇಖನದ ಬೇಸ್ ಯೂನಿಟ್.**- (1) ಸಂಖ್ಯಾಲೇಖನದ ಏಕಮಾನವು ಭಾರತೀಯ ಅಂಕಿಗಳ ಅಂತರರಾಷ್ಟ್ರೀಯ ರೂಪದ ಬೇಸ್ ಯೂನಿಟ್‌ನಲ್ಲಿ ಹೇಳತಕ್ಕದ್ದು.

(2) ಪ್ರತಿಯೊಂದು ಅಂಕಿಯ ಎಣಿಕೆಯನ್ನು ದಶಮಾಂಶ ಪದ್ಧತಿಗೆ ಅನುಸಾರವಾಗಿ ಮಾಡತಕ್ಕದ್ದು.

(3) ಅಂಕಿಗಳ ದಶಮಾಂಶ ಗುಣಿತಗಳು ಮತ್ತು ಉಪಗುಣಿತಗಳು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಇರುವ ಅಂಥ ವರ್ಗನಾಮದಲ್ಲಿ ಹೇಳತಕ್ಕದ್ದು ಮತ್ತು ಅದನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ಬರೆಯತಕ್ಕದ್ದು.

**7. ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಪ್ರಮಾಣ ಬೇಸ್ ಯೂನಿಟ್.**– (1) 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಮಾನಕಗಳು, ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಪ್ರಮಾಣ ಬೇಸ್ ಯೂನಿಟ್‌ಗಳು ಆಗಿರತಕ್ಕದ್ದು.

(2) ಪ್ರಕರಣ 6ರಲ್ಲಿ ನಿರ್ದಿಷ್ಟಪಡಿಸಿರುವ ಸಂಖ್ಯಾಲೇಖನದ ಬೇಸ್ ಯೂನಿಟ್‌ಗಳೇ ಸಂಖ್ಯಾಲೇಖನದ ಪ್ರಮಾಣ ಬೇಸ್ ಯೂನಿಟ್ ಆಗಿರತಕ್ಕದ್ದು.

(3) ಪ್ರಕರಣ 5ರಲ್ಲಿ ಹೇಳಿರುವ ಬೇಸ್ ಯೂನಿಟ್‌ಗಳ ಮೌಲ್ಯವನ್ನು ಕಂಡುಕೊಳ್ಳುವ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ವಸ್ತುಗಳನ್ನು ಅಥವಾ ಸಲಕರಣೆಗಳನ್ನು ಸಿದ್ಧಪಡಿಸತಕ್ಕದ್ದು ಅಥವಾ ಸಿದ್ಧಪಡಿಸುವಂತೆ ಮಾಡತಕ್ಕದ್ದು.

(4) ಆಕೃತಿ ಲಕ್ಷಣಗಳು, ವಿನ್ಯಾಸ, ತಯಾರಿಕಾ ವಿವರಗಳು, ಸಾಮಗ್ರಿಗಳು, ಸಲಕರಣೆಗಳು, ಕಾರ್ಯಸಾಮರ್ಥ್ಯ ಸಹನೀಯ ವ್ಯತ್ಯಾಸಗಳು, ಮರುಸತ್ಯಾಪನೆಯ ಅವಧಿ, ಪರೀಕ್ಷೆಗಳ ವಿಧಾನಗಳು ಅಥವಾ ಕಾರ್ಯವಿಧಾನಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**8. ಪ್ರಮಾಣ ತೂಕದ ಬಟ್ಟು ಅಳತೆಯ ಮಾಪಕ ಅಥವಾ ಅಂಕಿ.**– (1) ಯಾವ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಅಂಥ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಪ್ರಮಾಣ ಬೇಸ್ ಯೂನಿಟ್‌ಗೆ ಅನುರೂಪವಾಗಿರುತ್ತದೆಯೋ ಮತ್ತು ಅದಕ್ಕೆ ಅನ್ವಯವಾಗುವಂಥ 7ನೇ ಪ್ರಕರಣದ ಉಪಬಂಧಗಳಿಗೂ ಅನುರೂಪವಾಗಿರುತ್ತದೆಯೋ ಆ ಯಾವುದೇ ತೂಕದ ಬಟ್ಟು ಅಥವಾ ಅಳತೆಯ ಮಾಪಕವು, ಪ್ರಮಾಣ ತೂಕದ ಬಟ್ಟು ಅಥವಾ ಅಳತೆಯ ಮಾಪಕ ಆಗಿರತಕ್ಕದ್ದು.

(2) ಪ್ರಕರಣ 6ರ ಉಪಬಂಧಗಳಿಗೆ ಅನುರೂಪವಾಗಿರುವ ಯಾವುದೇ ಅಂಕಿಯು ಪ್ರಮಾಣ ಅಂಕಿ ಆಗಿರತಕ್ಕದ್ದು.

(3) ಪ್ರಮಾಣವಲ್ಲದ ತೂಕದ ಬಟ್ಟು, ಅಳತೆಯ ಮಾಪಕ ಅಥವಾ ಅಂಕಿ ಅಲ್ಲದ ಯಾವುದೇ ತೂಕದ ಬಟ್ಟು, ಅಳತೆಯ ಮಾಪಕ ಅಥವಾ ಅಂಕಿಯನ್ನು ಪ್ರಮಾಣವಾಗಿ ತೂಕದ ಬಟ್ಟು ಆಗಿ, ಅಳತೆಯ ಮಾಪಕವಾಗಿ ಅಥವಾ ಅಂಕಿ ಆಗಿ ಬಳಸತಕ್ಕದ್ದಲ್ಲ.

(4) ಪ್ರಕರಣ 8ರ ಮೇರೆಗೆ ನಿರ್ದಿಷ್ಟಪಡಿಸಿದ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಪ್ರಮಾಣಗಳಿಗೆ ಯಾವುದೇ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಅನುರೂಪವಾಗಿದ್ದ ಹೊರತು ಅದನ್ನು ತಯಾರಿಸತಕ್ಕದ್ದಲ್ಲ ಅಥವಾ ಆಮದು ಮಾಡಿಕೊಳ್ಳತಕ್ಕದ್ದಲ್ಲ:

ಪರಂತು, ರಫ್ತಿನ ಉದ್ದೇಶಕ್ಕಾಗಿಯೇ ಅಥವಾ ಯಾವುದೇ ವೈಜ್ಞಾನಿಕ ಪರೀಕ್ಷೆಯ ಅಥವಾ ಸಂಶೋಧನೆಯ ಉದ್ದೇಶಕ್ಕಾಗಿಯೇ ತಯಾರಿಸಿದವುಗಳಿಗೆ ಈ ಪ್ರಕರಣದಲ್ಲಿನ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

**9. ಮೂಲ ಪ್ರಮಾಣ ಮೂಲದಲ್ಲದ ಪ್ರಮಾಣ ಮತ್ತು ಕಾರ್ಯಾರ್ಥ ಪ್ರಮಾಣ.**– (1) ತೂಕದ ಬಟ್ಟಿನ ಮತ್ತು ಅಳತೆಯ ಮಾಪಕದ ಮೂಲ ಪ್ರಮಾಣಗಳು, ಮೂಲದಲ್ಲದ ಪ್ರಮಾಣಗಳು ಮತ್ತು ಕಾರ್ಯಾರ್ಥ ಪ್ರಮಾಣಗಳು ನಿಯಮಿಸಬಹುದಾದಂಥವು ಆಗಿರತಕ್ಕದ್ದು.

(2) ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಫೀಜನ್ನು ಸಂದಾಯ ಮಾಡಿದ ನಂತರ ಪ್ರತಿಯೊಂದು ಮೂಲ ಪ್ರಮಾಣವನ್ನು, ಮೂಲದಲ್ಲದ ಪ್ರಮಾಣವನ್ನು ಮತ್ತು ಕಾರ್ಯಾರ್ಥ ಪ್ರಮಾಣವನ್ನು ಸತ್ಯಾಪನೆ ಮಾಡತಕ್ಕದ್ದು ಮತ್ತು ಅದಕ್ಕೆ ಮುದ್ರೆ ಹಾಕತಕ್ಕದ್ದು.

(3) ಉಪಪ್ರಕರಣ (2)ರ ಉಪಬಂಧಗಳಿಗನುಸಾರವಾಗಿ, ಸತ್ಯಾಪನೆ ಮಾಡಿಲ್ಲದ ಮತ್ತು ಮುದ್ರೆ ಹಾಕಿಲ್ಲದ ಪ್ರತಿಯೊಂದು ಮೂಲ ಪ್ರಮಾಣವನ್ನು, ಮೂಲದಲ್ಲದ ಪ್ರಮಾಣವನ್ನು, ಮತ್ತು ಕಾರ್ಯಾರ್ಥ ಪ್ರಮಾಣವನ್ನು ಸಿಂಧುವಾದ ಪ್ರಮಾಣವೆಂದು ಭಾವಿಸತಕ್ಕದ್ದಲ್ಲ.

**10. ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಒಂದು ನಿರ್ದಿಷ್ಟ ಉದ್ದೇಶಗಳಿಗೆ ಬಳಸುವುದು.–** ಯಾವುದೇ ಸರಕುಗಳಿಗೆ, ಸರಕುಗಳ ವರ್ಗಕ್ಕೆ ಅಥವಾ ವಾಗ್ದಾನಗಳಿಗೆ ಸಂಬಂಧಪಟ್ಟಂತೆ ನಿಯಮಿಸಬಹುದಾದಂಥ ತೂಕದ ಬಟ್ಟಿನಲ್ಲಿ, ಅಳತೆಯ ಮಾಪಕದಲ್ಲಿ ಅಥವಾ ಅಂಕಿ ಮಾನಕದಲ್ಲಿ ವಹಿವಾಟನ್ನು, ವ್ಯಾಪಾರವನ್ನು ಮಾಡತಕ್ಕದ್ದು ಅಥವಾ ಕರಾರನ್ನು ಮಾಡಿಕೊಳ್ಳತಕ್ಕದ್ದು.

**11. ತೂಕದ ಬಟ್ಟಿನ, ಅಳತೆಯ ಮಾಪಕದ ಅಥವಾ ಸಂಖ್ಯಾಲೇಖನದ ಪ್ರಮಾಣ ಯುನಿಟ್‌ಗಳಲ್ಲಲ್ಲದೆ ಅನ್ಯಥಾ ಬೆಲೆ ನಮೂದಿಸುವುದು, ಇತ್ಯಾದಿಗಳ ನಿಷೇಧ.–** (1) ಯಾರೇ ವ್ಯಕ್ತಿಯು ಯಾವುವೇ ಸರಕುಗಳಿಗೆ, ವಸ್ತುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಪಟ್ಟಂತೆ,–

(ಎ) ಯಾವುದೇ ಬೆಲೆಯನ್ನು ಅಥವಾ ಚಾರ್ಜ್‌ನ್ನು ಬಾಯಿಮಾತಿನಲ್ಲಿ ಅಥವಾ ಅನ್ಯಥಾ ಹೇಳತಕ್ಕದ್ದಲ್ಲ ಅಥವಾ ಘೋಷಣೆ ಮಾಡತಕ್ಕದ್ದಲ್ಲ; ಅಥವಾ

(ಬಿ) ಯಾವುದೇ ಬೆಲೆಪಟ್ಟಿಯನ್ನು, ಖರೀದಿಪಟ್ಟಿಯನ್ನು, ನಗದು ರಸೀದಿಯನ್ನು ಅಥವಾ ಇತರ ದಸ್ತಾವೇಜನ್ನು ನೀಡತಕ್ಕದ್ದಲ್ಲ ಅಥವಾ ಪ್ರದರ್ಶಿಸತಕ್ಕದ್ದಲ್ಲ; ಅಥವಾ

(ಸಿ) ಯಾವುದೇ ಜಾಹೀರಾತು, ಭಿತ್ತಿಪತ್ರ ಅಥವಾ ಇತರ ದಸ್ತಾವೇಜುಗಳನ್ನು ಸಿದ್ಧಪಡಿಸತಕ್ಕದ್ದಲ್ಲ ಅಥವಾ ಪ್ರಕಟಿಸತಕ್ಕದ್ದಲ್ಲ; ಅಥವಾ

(ಡಿ) ಮುಂಚಿತವಾಗಿ ಪ್ಯಾಕು ಮಾಡಿದ ಸರಕು ಸಾಮಗ್ರಿಗಳ ನಿವ್ವಳ ಪರಿಮಾಣವನ್ನು ಸೂಚಿಸತಕ್ಕದ್ದಲ್ಲ; ಅಥವಾ

(ಇ) ಯಾವುದೇ ವಹಿವಾಟನ್ನು ಅಥವಾ ಅದರ ಸಂರಕ್ಷಣೆಯನ್ನು ಯಾವುದೇ ತೂಕದ ಬಟ್ಟಿಗೆ, ಅಳತೆಯ ಮಾಪಕಕ್ಕೆ ಪ್ರಮಾಣ ಬೇಸ್ ಯೂನಿಟ್‌ಗೆ ಅಥವಾ ಸಂಖ್ಯಾಲೇಖನಕ್ಕೆ ಅನುಸಾರವಾಗಿ ಅಲ್ಲದೆ, ಯಾವುದೇ ವಹಿವಾಟನ್ನು ಪರಿಮಾಣದಲ್ಲಿ ಅಥವಾ ಅಳೆಯಬಹುದಾದ ಅಂಶದಲ್ಲಿ, ಸುತ್ತಳತೆಯಲ್ಲಿ ವ್ಯಕ್ತಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರ ಉಪಬಂಧಗಳು ಯಾವುವೇ ಸರಕುಗಳ, ವಸ್ತುಗಳ ಅಥವಾ ಸೇವೆಯ ರಫ್ತಿಗೆ ಅನ್ವಯವಾಗತಕ್ಕದ್ದಲ್ಲ.

**12. ಪ್ರಮಾಣ ತೂಕದ ಬಟ್ಟಿಗೆ, ಅಳತೆಯ ಮಾಪಕಕ್ಕೆ ಅಥವಾ ಸಂಖ್ಯಾಲೇಖನಕ್ಕೆ ತದ್ವಿರುದ್ಧವಾದ ಯಾವುದೇ ರೂಢಿ, ಬಳಕೆ, ಇತ್ಯಾದಿಗಳು ಅನೂರ್ಜಿತ.–** ಯಾರೇ ವ್ಯಕ್ತಿಯು, ಕರಾರಿಗೆ ಅಥವಾ ಇತರ ಒಪ್ಪಂದಕ್ಕೆ ಸಂಬಂಧಪಟ್ಟಂತೆ, ಯಾವ ರೂಢಿಯು ಬಳಕೆಯು ಆಚರಣೆಯು ಅಥವಾ ಯಾವುದೇ ಸ್ವರೂಪದ ವಿಧಾನವು ತೂಕದ ಬಟ್ಟಿಗೆ, ಅಳತೆಯ ಮಾಪಕದ ಅಥವಾ ಸಂಖ್ಯಾಲೇಖನದ ಮೂಲಕ ನಿರ್ದಿಷ್ಟಪಡಿಸಿದ ಪ್ರಮಾಣಕ್ಕಿಂತ ಹೆಚ್ಚಿಗೆಯಾಗಿ ಅಥವಾ ಅದಕ್ಕೂ ಕಡಿಮೆಯಾಗಿ ಯಾವುದೇ ಪದಾರ್ಥವನ್ನು, ವಸ್ತುವನ್ನು ಅಥವಾ ಸೇವೆಯನ್ನು ಸದರಿ ವಸ್ತುವಿಗೆ, ಪದಾರ್ಥಕ್ಕೆ ಅಥವಾ ಸೇವೆಗೆ ಸಂಬಂಧಪಟ್ಟಂತೆ ತಗಾದೆ ಮಾಡುವುದಕ್ಕೆ, ಸ್ವೀಕರಿಸುವುದಕ್ಕೆ, ಅಥವಾ ತಗಾದೆ ಮಾಡಿಸುವುದಕ್ಕೆ ಅಥವಾ ಸ್ವೀಕರಿಸುವಂತೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತದೋ ಆ ಯಾವುದೇ ರೂಢಿಯು, ಬಳಕೆಯು, ಆಚರಣೆಯು ಅಥವಾ ಯಾವುದೇ ಸ್ವರೂಪದ ವಿಧಾನವು ಅನೂರ್ಜಿತವಾಗತಕ್ಕದ್ದು.

## ಅಧ್ಯಾಯ III

## ನಿರ್ದೇಶಕನ, ನಿಯಂತ್ರಕನ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳ ನೇಮಕ ಮತ್ತು ಅಧಿಕಾರಗಳು

**13. ನಿರ್ದೇಶಕನ, ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕ ಮತ್ತು ಅಧಿಕಾರಗಳು.–** (1) ಅಂತರರಾಜ್ಯ ವ್ಯಾಪಾರಕ್ಕೆ ಮತ್ತು ವಾಣಿಜ್ಯಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ಪ್ರದತ್ತವಾದ ಅಥವಾ ಅವರಿಗೆ ವಹಿಸಿದ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಕಾನೂನು ಮಾಪನ ವಿಜ್ಞಾನ ನಿರ್ದೇಶಕನನ್ನು, ಹೆಚ್ಚುವರಿ ನಿರ್ದೇಶಕನನ್ನು, ಜಂಟಿ ನಿರ್ದೇಶಕನನ್ನು, ಉಪನಿರ್ದೇಶಕನನ್ನು, ಸಹಾಯಕ ನಿರ್ದೇಶಕನನ್ನು ಮತ್ತು ಇತರ ನೌಕರರನ್ನು ನೇಮಕ ಮಾಡಬಹುದು.

(2) ಉಪಪ್ರಕರಣ (1)ರ ಮೇರೆಗೆ ನೇಮಕಗೊಳ್ಳಬೇಕಾದ ನಿರ್ದೇಶಕನಿಗೆ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳಿಗೆ ಇರಬೇಕಾದ ಅರ್ಹತೆಯು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ ನಿರ್ದೇಶಕನು ಮತ್ತು ಪ್ರತಿಯೊಬ್ಬ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳೀಯ ಎಲ್ಲೆಗಳ ಒಳಗೆ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ನಿರ್ದೇಶಕನ ಸಾಮಾನ್ಯ ಅಧೀಕ್ಷಣೆಯಲ್ಲಿ, ನಿರ್ದೇಶನದ ಮೇರೆಗೆ ಮತ್ತು ನಿಯಂತ್ರಣದಲ್ಲಿ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(5) ಯಾವುದೇ ಕರ್ತವ್ಯವನ್ನು ನೆರವೇರಿಸಲು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಧಿಕೃತಗೊಂಡ ನಿರ್ದೇಶಕನನ್ನು, ನಿಯಂತ್ರಕನನ್ನು ಮತ್ತು ಪ್ರತಿಯೊಬ್ಬ ಕಾನೂನು ಮಾಪನ ವಿಜ್ಞಾನ ಅಧಿಕಾರಿಯನ್ನು ಭಾರತ ದಂಡ ಸಂಹಿತೆಯ (1860 ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರನೆಂದು ಭಾವಿಸತಕ್ಕದ್ದು.

(6) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಮಾಡಿದ ಯಾವುದೇ ಆದೇಶದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ, ಯಾವುದೇ ಕರ್ತವ್ಯವನ್ನು ನೆರವೇರಿಸಲು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಧಿಕೃತಗೊಂಡ ನಿರ್ದೇಶಕನ, ನಿಯಂತ್ರಕನ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್ನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(7) ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಸಮ್ಮತಿಪಡೆದು ಮತ್ತು ಅದು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ, ಪರಿಮಿತಿಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಸೂಕ್ತವೆಂದು ತಾನು ಭಾವಿಸಬಹುದಾದಂತೆ, ಈ ಅಧಿನಿಯಮದ ಮೇರೆಗೆ ನಿರ್ದೇಶಕನಿಗೆ ಇರುವಂಥ ಅಧಿಕಾರಗಳನ್ನು ರಾಜ್ಯ ಕಾನೂನು ಮಾಪನ ವಿಜ್ಞಾನ ನಿಯಂತ್ರಕನಿಗೆ ಪ್ರತ್ಯಾಯೋಜಿಸಬಹುದು ಮತ್ತು ಅಂಥ ನಿಯಂತ್ರಕನು, ಅವನು ತನಗೆ ಪ್ರತ್ಯಾಯೋಜಿಸಿದ ಅಧಿಕಾರಗಳನ್ನು ಸೂಕ್ತವೆಂದು ತಾನು ಭಾವಿಸಬಹುದಾದಂಥ ಯಾರೇ ಕಾನೂನು ಮಾಪನ ಅಧಿಕಾರಿಗೆ ಪ್ರತ್ಯಾಯೋಜಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವೆಂದು ಅಥವಾ ವಿಹಿತವೆಂದು ಅಭಿಪ್ರಾಯಪಟ್ಟರೆ, ಅವನು ಅಂಥ ಅಧಿಕಾರಿಗೆ ಅಂಥ ಅಧಿಕಾರಗಳನ್ನು ಹಾಗೆ ಪ್ರತ್ಯಾಯೋಜಿಸಬಹುದು ಮತ್ತು ಅಂಥ ನಿಯಂತ್ರಕನು ಅಂಥ ಯಾವುವೇ ಅಧಿಕಾರಗಳನ್ನು ಪ್ರತ್ಯಾಯೋಜಿಸಿದ್ದರೆ ಯಾರಿಗೆ ಅಂಥ ಅಧಿಕಾರಗಳನ್ನು ಪ್ರತ್ಯಾಯೋಜಿಸಲಾಗಿದೆಯೋ ಆ ವ್ಯಕ್ತಿಯು ಆ ಅಧಿಕಾರಗಳನ್ನು ಈ ಅಧಿನಿಯಮದ ಮೇರೆಗೆ ಅವನಿಗೆ ನೇರವಾಗಿ, ಆದರೆ ಪ್ರತ್ಯಾಯೋಜನೆ ಮೂಲಕ ಅಲ್ಲದೇ ಪ್ರಧಾನ ಮಾಡಿದಿದ್ದರೆ ಯಾವ ರೀತಿಯಲ್ಲಿ ಮತ್ತು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಚಲಾಯಿಸಬಹುದಿತ್ತೋ ಅದೇ ರೀತಿಯಲ್ಲಿ ಮತ್ತು ಅಷ್ಟೇ ಪರಿಣಾಮಕಾರಿಯಾಗಿ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(8) ಉಪಪ್ರಕರಣ (7)ರ ಮೇರೆಗೆ ಯಾವುವೇ ಅಧಿಕಾರಗಳನ್ನು ಪ್ರತ್ಯಾಯೋಜಿಸಿದ್ದರೆ, ಹಾಗೆ ಪ್ರತ್ಯಾಯೋಜಿಸಿರುವ ಅಧಿಕಾರಗಳನ್ನು ನಿರ್ದೇಶಕನ ಸಾಮಾನ್ಯ ಅಧೀಕ್ಷಣೆಯಲ್ಲಿ, ನಿರ್ದೇಶನದ ಮೇರೆಗೆ ಮತ್ತು ಮಾರ್ಗದರ್ಶನದಲ್ಲಿ ಚಲಾಯಿಸತಕ್ಕದ್ದು.

**14. ನಿಯಂತ್ರಕನ, ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕ.–** (1) ರಾಜ್ಯದ ಒಳಗೆ ವ್ಯಾಪಾರಕ್ಕೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ರಾಜ್ಯ ಕಾನೂನು ಮಾಪನ ವಿಜ್ಞಾನ ನಿಯಂತ್ರಕನನ್ನು, ಹೆಚ್ಚುವರಿ ನಿಯಂತ್ರಕನನ್ನು, ಜಂಟಿ ನಿಯಂತ್ರಕನನ್ನು, ಉಪ ನಿಯಂತ್ರಕನನ್ನು, ಸಹಾಯಕ ನಿಯಂತ್ರಕನನ್ನು, ನಿರೀಕ್ಷಕನನ್ನು ಮತ್ತು ಇತರ ನೌಕರರನ್ನು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅವರಿಗೆ ಪ್ರಧಾನ ಮಾಡಿದ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಮತ್ತು ವಹಿಸಿದ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ನೇಮಕ ಮಾಡಬಹುದು.

(2) ಉಪಪ್ರಕರಣ (1)ರ ಮೇರೆಗೆ ನೇಮಕಗೊಳ್ಳಬೇಕಾದ, ನಿಯಂತ್ರಕನಿಗೆ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳಿಗೆ ಇರಬೇಕಾದ ಅರ್ಹತೆಯು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ, ನಿಯಂತ್ರಕನು ಮತ್ತು ಪ್ರತಿಯೊಬ್ಬ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳೀಯ ಎಲ್ಲೆಗಳ ಒಳಗೆ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, ನಿಯಂತ್ರಕನ ಸಾಮಾನ್ಯ ಅಧೀಕ್ಷಣೆಯಲ್ಲಿ, ನಿರ್ದೇಶನದ ಮೇರೆಗೆ ಮತ್ತು ನಿಯಂತ್ರಣದಲ್ಲಿ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**15. ಪರಿವೀಕ್ಷಣೆ ಮಾಡಲು, ವಶಪಡಿಸಿಕೊಳ್ಳಲು ಅಧಿಕಾರ ಇತ್ಯಾದಿ.–** (1) ನಿರ್ದೇಶಕನು, ನಿಯಂತ್ರಕನು ಅಥವಾ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ಯಾವ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಅಥವಾ ಇತರ ಸರಕುಗಳಿಗೆ ಸಂಬಂಧಪಟ್ಟಂತೆ ಯಾವುದೇ ವ್ಯಾಪಾರವು ಅಥವಾ ವಾಣಿಜ್ಯವು ನಡೆದಿದೆಯೋ ಅಥವಾ ಅಂಥ ಯಾವುದೇ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸಲು ಉದ್ದೇಶಿಸಲಾಗಿದೆಯೋ ಮತ್ತು ಆ ಯಾವುದೇ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಅಥವಾ ಇತರ ಸರಕುಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗಿನ ಶಿಕ್ಷಾರ್ಹವಾದ ಅಪರಾಧವು ನಡೆದಿದೆಯೆಂದು ಅಥವಾ ನಡೆಯುವ ಸಂಭವವಿದೆಯೆಂದು ತೋರುತ್ತದೆಯೋ ಆ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಅಥವಾ ಇತರ ಸರಕನ್ನು ಯಾವುದೇ ಆವರಣದಲ್ಲಿ ಇಡಲಾಗಿದೆ ಎಂದು ಅಥವಾ ಅದನ್ನು ಬಚ್ಚಿಡಲಾಗಿದೆ ಎಂದು ಅಥವಾ ಅದರ ಸಾಗಣೆ ಆಗುತ್ತಿದೆ ಎಂದು ನಂಬಲು, ಯಾರೇ ವ್ಯಕ್ತಿಗೆ ಅವನಿಗೆ ಕೊಟ್ಟ ಮತ್ತು ತಾನು ಬರೆದುಕೊಂಡಿದ್ದ ಯಾವುದೇ ಮಾಹಿತಿಯಿಂದಾಗಲಿ ಅಥವಾ ತನಗೆ ಅದು ತಿಳಿದುಬಂದಿದ್ದರಿಂದಾಗಲಿ ಅಥವಾ ಅನ್ಯಥಾ ಯಾವುದೇ ಕಾರಣ ಇದ್ದರೆ,–

(ಎ) ಯಾವುದೇ ಸೂಕ್ತ ಸಮಯದಲ್ಲಿ ಅಂಥ ಆವರಣವನ್ನು ಪ್ರವೇಶಿಸಬಹುದು ಮತ್ತು ಯಾವ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಅಥವಾ ಇತರ ಸರಕುಗಳಿಗೆ ಸಂಬಂಧಪಟ್ಟಂತೆ ವ್ಯಾಪಾರವು ಅಥವಾ ವಾಣಿಜ್ಯವು ನಡೆದಿದೆಯೋ ಅಥವಾ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸಲು ಉದ್ದೇಶಿಸಲಾಗಿದೆಯೋ ಆ ಯಾವುದೇ ತೂಕದ ಬಟ್ಟನ್ನು, ಅಳತೆಯ ಮಾಪಕವನ್ನು ಅಥವಾ ಇತರ ಸರಕುಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಯನ್ನು, ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜನ್ನು ಶೋಧಿಸಬಹುದು ಮತ್ತು ಪರಿಶೀಲಿಸಬಹುದು;

(ಬಿ) ಯಾವುದೇ ವ್ಯಾಪಾರವು ಮತ್ತು ವಾಣಿಜ್ಯವು ನಡೆಯುತ್ತಿರುವಾಗ ಅಥವಾ ಅಂಥ ವಾಣಿಜ್ಯಕ್ಕೆ ಅಥವಾ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗಿನ ಶಿಕ್ಷಾರ್ಹವಾದ ಯಾವುದೇ ಅಪರಾಧವು ನಡೆದಿದೆ ಎಂಬುದನ್ನು ಅಥವಾ ಅಂಥ ಯಾವುದೇ ಅಪರಾಧವು ನಡೆಯುವ ಸಂಭವ ಇದೆ ಎಂಬುದನ್ನು ತೋರಿಸುವ ಸಾಕ್ಷ್ಯವನ್ನು, ಯಾವ ತೂಕದ ಬಟ್ಟು, ಅಳತೆಯ ಮಾಪಕವು ಅಥವಾ ಇತರ ಸರಕುಗಳು ಮತ್ತು ಯಾವ ದಾಖಲೆಯು, ರಿಜಿಸ್ಟರು ಅಥವಾ ಇತರ ದಸ್ತಾವೇಜು ಅಥವಾ ವಸ್ತುವು ಒದಗಿಸುತ್ತದೆ ಎಂದು ನಂಬಲು ತನಗೆ ಕಾರಣವಿದೆಯೋ ಆ ಯಾವುದೇ ತೂಕದ ಬಟ್ಟನ್ನು, ಅಳತೆಯ ಮಾಪಕವನ್ನು ಅಥವಾ ಇತರ ಸರಕುಗಳನ್ನು ಮತ್ತು ಆ ಯಾವುದೇ ದಾಖಲೆಯನ್ನು, ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜನ್ನು ಅಥವಾ ವಸ್ತುವನ್ನು ವಶಪಡಿಸಿಕೊಳ್ಳಬಹುದು.

(2) ನಿರ್ದೇಶಕನು, ನಿಯಂತ್ರಕನು ಅಥವಾ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, (1)ನೇ ಉಪಪ್ರಕರಣದಲ್ಲಿ ಹೇಳಿರುವ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪನಕ್ಕೆ ಸಂಬಂಧಿಸಿದ ಪ್ರತಿಯೊಂದು ದಸ್ತಾವೇಜನ್ನು ಅಥವಾ ಇತರ ದಾಖಲೆಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸಬಹುದು ಮತ್ತು ಅಂಥ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ತನ್ನ ಅಭಿರಕ್ಷೆಯಲ್ಲಿಟ್ಟುಕೊಂಡಿರುವ ವ್ಯಕ್ತಿಯು ಅಂಥ ಆದೇಶವನ್ನು ಪಾಲಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ವಶಪಡಿಸಿಕೊಂಡಿರುವ ಯಾವುವೇ ಸರಕುಗಳು ಬೇಗನೇ ಅಥವಾ ಸಹಜವಾಗಿ ಹಾಳಾಗುವಂತವುಗಳಾಗಿದ್ದರೆ, ನಿರ್ದೇಶಕನು, ನಿಯಂತ್ರಕನು ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ಅಂಥ ಸರಕುಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡಬಹುದು.

(4) ಈ ಪ್ರಕರಣದ ಮೇರೆಗೆ ಮಾಡುವ ಪ್ರತಿಯೊಂದು ಶೋಧನೆಯನ್ನು ಅಥವಾ ವಶಪಡಿಸಿಕೊಳ್ಳುವುದನ್ನು ಶೋಧನೆಗಳಿಗೆ ಅಥವಾ ವಶಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ 1973ರ ದಂಡ ಪ್ರಕ್ರಿಯಾ ಸಂಹಿತೆ (1974 ರ 2)ಯಲ್ಲಿರುವ ಉಪಬಂಧಗಳಿಗೆ ಅನುಸಾರವಾಗಿ ಮಾಡತಕ್ಕದ್ದು.

**16. ಮುಟ್ಟುಗೋಲು.–** (1) ಯಾವುದೇ ವ್ಯಾಪಾರವನ್ನು ಮತ್ತು ವಾಣಿಜ್ಯವನ್ನು ನಡೆಸುವಾಗ ಅಥವಾ ವ್ಯಾಪಾರಕ್ಕೆ ಮತ್ತು ವಾಣಿಜ್ಯಕ್ಕೆ ಸಂಬಂಧಪಟ್ಟಂತೆ ಬಳಸಿದ ಮತ್ತು 15ನೇ ಪ್ರಕರಣದ ಮೇರೆಗೆ ವಶಪಡಿಸಿಕೊಂಡ ಪ್ರಮಾಣವಲ್ಲದ ಅಥವಾ ಸತ್ಯಾಪನೆ ಮಾಡಿಲ್ಲದ ಪ್ರತಿಯೊಂದು ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಮತ್ತು 18ನೇ ಪ್ರಕರಣವನ್ನು ಉಲ್ಲಂಘಿಸಿ ಮಾಡಿದ ಯಾವುದೇ ಪ್ಯಾಕೇಜು, ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಆಗುವುದಕ್ಕೆ ಬದ್ಧವಾಗಿರತಕ್ಕದ್ದು:

ಪರಂತು, ಯಾವ ವ್ಯಕ್ತಿಯಿಂದ ಅಂಥ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ವಶಪಡಿಸಿಕೊಳ್ಳಲಾಗಿದೆಯೋ ಅವುಗಳನ್ನು ನಿಯಮಿಸಬಹುದಾದಂಥ ಕಾಲದೊಳಗೆ ಆ ವ್ಯಕ್ತಿಯು ಸತ್ಯಾಪನೆ ಮಾಡಿಸಿದ್ದರೆ ಮತ್ತು ಅವುಗಳಿಗೆ ಸ್ಟಾಂಪು ಹಾಕಿಸಿದ್ದರೆ ಅಂಥ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಸರ್ಕಾರಕ್ಕೆ ಮುಟ್ಟುಗೋಲು ಆಗತಕ್ಕದ್ದಲ್ಲ.

(2) ಪ್ರಕರಣ 15ರ ಮೇರೆಗೆ ವಶಪಡಿಸಿಕೊಂಡ ಆದರೆ (1)ನೇ ಉಪಪ್ರಕರಣದ ಮೇರೆಗೆ ಮುಟ್ಟುಗೋಲು ಆಗದೇ ಇರುವ ಪ್ರತಿಯೊಂದು ತೂಕದ ಬಟ್ಟನ್ನು, ಅಳತೆಯ ಮಾಪಕವನ್ನು ಅಥವಾ ಇತರ ಸರಕುಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಪ್ರಾಧಿಕಾರವು ವಿಲೆ ಮಾಡತಕ್ಕದ್ದು.

**17. ತಯಾರಕರು, ಮುಂತಾದವರು ದಾಖಲೆಗಳನ್ನು ಮತ್ತು ರಿಜಿಸ್ಟರುಗಳನ್ನು ಇಡುವುದು.–** (1) ತೂಕದ ಬಟ್ಟುಗಳ ಅಥವಾ ಅಳತೆಯ ಮಾಪಕಗಳ ಪ್ರತಿಯೊಬ್ಬ ತಯಾರಕನು, ದುರಸ್ತಿಗಾರನು ಅಥವಾ ಡೀಲರನು ನಿಯಮಿಸಬಹುದಾದಂಥ ದಾಖಲೆಗಳನ್ನು ಮತ್ತು ರಿಜಿಸ್ಟರುಗಳನ್ನು ಇಡತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಇಟ್ಟಿರುವ ದಾಖಲೆಗಳನ್ನು ಮತ್ತು ರಿಜಿಸ್ಟರುಗಳನ್ನು 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪರಿವೀಕ್ಷಣೆ ಉದ್ದೇಶಕ್ಕಾಗಿ ಅಧಿಕೃತಗೊಂಡ ವ್ಯಕ್ತಿಗಳ ಮುಂದೆ ಪರಿವೀಕ್ಷಣೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

**18. ಮುಂಚಿತವಾಗಿಯೇ ಪ್ಯಾಕು ಮಾಡಿರುವ ಸರಕುಗಳ ಮೇಲೆ ಇರಬೇಕಾದ ಘೋಷಣೆಗಳು.–** (1) ಯಾರೇ ವ್ಯಕ್ತಿಯು, ಮುಂಚಿತವಾಗಿಯೇ ಪ್ಯಾಕು ಮಾಡಿರುವ ಯಾವುವೇ ಸರಕನ್ನು, ಅಂಥ ಪ್ಯಾಕೇಜು ನಿಯಮಿಸಬಹುದಾದಂತೆ ಪ್ರಮಾಣ ಪರಿಮಾಣಗಳಲ್ಲಿದ್ದ ಹೊರತು ಅಥವಾ ಅಂಥ ಸಂಖ್ಯೆಗಳಲ್ಲಿ ಇದ್ದ ಹೊರತು, ಮತ್ತು ಅದರ ಮೇಲೆ ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಘೋಷಣೆಗಳು ಮತ್ತು ವಿವರಗಳು ಇದ್ದ ಹೊರತು, ತಯಾರಿಸತಕ್ಕದ್ದಲ್ಲ, ಪ್ಯಾಕ್ ಮಾಡತಕ್ಕದ್ದಲ್ಲ, ಮಾರಾಟ ಮಾಡತಕ್ಕದ್ದಲ್ಲ, ಆಮದು ಮಾಡಿಕೊಳ್ಳತಕ್ಕದ್ದಲ್ಲ, ವಿತರಣೆ ಮಾಡತಕ್ಕದ್ದಲ್ಲ, ತಲುಪಿಸತಕ್ಕದ್ದಲ್ಲ, ಮಾರಾಟಕ್ಕೆ ಇಡತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ ಅಥವಾ ಇಟ್ಟುಕೊಂಡಿರತಕ್ಕದ್ದಲ್ಲ.

(2) ಮುಂಚಿತವಾಗಿಯೇ ಪ್ಯಾಕು ಮಾಡಿದ ಸರಕಿನ ಚಿಲ್ಲರೆ ಮಾರಾಟದ ಬೆಲೆಯನ್ನು ನಮೂದಿಸಿರುವ ಯಾವುದೇ ಜಾಹೀರಾತಿನಲ್ಲಿ, ಆ ಪ್ಯಾಕೇಜಿನಲ್ಲಿ ಇರುವ ಸರಕಿನ ನಿವ್ವಳ ಪರಿಮಾಣವು ಅಥವಾ ಅವು ಎಷ್ಟು ಸಂಖ್ಯೆಯಲ್ಲಿ ಇವೆಯೋ ಆ ಸಂಖ್ಯೆಗೆ ಸಂಬಂಧಿಸಿದಂತೆ ಇರುವ ಘೋಷಣೆಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಇರತಕ್ಕದ್ದು.

**19. ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಆಮದುಗಾರನ ನೋಂದಣಿ.–** ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿ ನಿರ್ದೇಶಕನ ಬಳಿ ಯಾರೇ ವ್ಯಕ್ತಿಯು ನೋಂದಾಯಿಸಿಕೊಂಡಿದ್ದ ಹೊರತು, ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಆಮದು ಮಾಡಿಕೊಳ್ಳತಕ್ಕದ್ದಲ್ಲ.

**20. ಪ್ರಮಾಣವಲ್ಲದ ತೂಕದ ಬಟ್ಟುಗಳನ್ನು ಅಥವಾ ಅಳತೆಯ ಮಾಪಕಗಳನ್ನು ಆಮದು ಮಾಡಿಕೊಳ್ಳುವಂತಿಲ್ಲ.–** ಯಾವುದೇ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಅದು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿಗದಿಪಡಿಸಿದ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ನಿರ್ದಿಷ್ಟ ಪ್ರಮಾಣಗಳಿಗೆ ಅನುರೂಪವಾಗಿದ್ದ ಹೊರತು ಅದನ್ನು ಬಿಡಿಬಿಡಿಯಾಗಿ ಆಗಲಿ ಅಥವಾ ಯಾವುದೇ ಯಂತ್ರದ ಭಾಗವಾಗಿಯಾಗಲಿ ಅಥವಾ ಘಟಕವಾಗಿಯಾಗಲಿ ಆಮದು ಮಾಡಿಕೊಳ್ಳತಕ್ಕದ್ದಲ್ಲ.

**21. ಕಾನೂನು ಮಾಪನ ವಿಜ್ಞಾನದಲ್ಲಿ ತರಬೇತಿ.–** (1) ಕಾನೂನು ಮಾಪನ ವಿಜ್ಞಾನದಲ್ಲಿ ಮತ್ತು ಇತರ ಸಂಬಂಧಿತ ಜ್ಞಾನ ಶಾಖೆಗಳಲ್ಲಿ ತರಬೇತಿ ನೀಡುವುದಕ್ಕಾಗಿ ತೂಕ ಮತ್ತು ಅಳತೆ ಮಾನಕ ಅಧಿನಿಯಮ, 1976ರ (1976 ರ 60) ಉಪಬಂಧಗಳ ಮೇರೆಗೆ ಸ್ಥಾಪಿತವಾದ "ಭಾರತ ಕಾನೂನು ಮಾಪನ ವಿಜ್ಞಾನ ಸಂಸ್ಥೆ" ಯನ್ನು (ಇದರಲ್ಲಿ ಇನ್ನು ಮುಂದೆ "ಸಂಸ್ಥೆ" ಎಂದು ಉಲ್ಲೇಖಿಸಲಾಗಿದೆ) ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಸ್ಥಾಪಿತವಾದುದೆಂದು ಭಾವಿಸತಕ್ಕದ್ದು.

(2) ಸಂಸ್ಥೆಯ ಆಡಳಿತ ಮತ್ತು ನಿಯಂತ್ರಣವು, ಬೋಧಕ ಸಿಬ್ಬಂದಿಯು ಮತ್ತು ಇತರ ನೌಕರರು, ಅಲ್ಲಿ ತರಬೇತಿಗಾಗಿ ಇರಬೇಕಾದ ಕೋರ್ಸುಗಳು ಮತ್ತು ಪಠ್ಯಕ್ರಮಗಳು, ಅದರಲ್ಲಿ ಪ್ರವೇಶ ಪಡೆಯುವುದಕ್ಕಾಗಿ ವ್ಯಕ್ತಿಗೆ ಯಾವ ಅರ್ಹತೆಗಳು ಇರಬೇಕೋ, ಆ ಅರ್ಹತೆಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**22. ಮಾದರಿಗಳ ಅನುಮೋದನೆ.–** ಪ್ರತಿಯೊಬ್ಬ ವ್ಯಕ್ತಿಯು, ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ತಯಾರಿಸುವುದಕ್ಕೂ ಮೊದಲು ಅಥವಾ ಆಮದು ಮಾಡಿಕೊಳ್ಳುವುದಕ್ಕೂ ಮೊದಲು, ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಮತ್ತು ಅಂಥ ಪ್ರಾಧಿಕಾರದಿಂದ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮಾದರಿಗಳ ಅನುಮೋದನೆಗೆ ಕೋರತಕ್ಕದ್ದು:

ಪರಂತು, ಯಾವುದೇ ಬೀಡು ಕಬ್ಬಿಣಕ್ಕೆ, ಹಿತ್ತಾಳೆಗೆ, ಚಿನ್ನ ಬೆಳ್ಳಿಗಟ್ಟಿಗೆ ಅಥವಾ ಕ್ಯಾರೆಟ್ ತೂಕದ ಬಟ್ಟಿಗೆ ಅಥವಾ ಯಾವುದೇ ತಕ್ಕಡಿ ಕೋಲಿಗೆ, ಜವಳಿಯನ್ನು ಅಥವಾ ಚೌಬೀನೆಯನ್ನು ಅಳತೆ ಮಾಡಲು ಚಿಲ್ಲರೆ ವ್ಯಾಪಾರದಲ್ಲಿ ಸಾಮಾನ್ಯವಾಗಿ ಬಳಕೆಯಾಗುತ್ತಿರುವ (ಅಳತೆ ಟೇಪುಗಳಲ್ಲದ) ಅಳತೆ ಮಾಪಕಗಳಿಗೆ, ಸೀಮೆಎಣ್ಣೆಯನ್ನು, ಹಾಲನ್ನು ಅಥವಾ ಸೇವನೆ ಯೋಗ್ಯ ಪಾನೀಯಗಳನ್ನು ಅಳೆಯಲು ಚಿಲ್ಲರೆ ವ್ಯಾಪಾರದಲ್ಲಿ ಸಾಮಾನ್ಯವಾಗಿ ಬಳಸುವ ಇಪ್ಪತ್ತು ಲೀಟರುಗಳ ಪ್ರಮಾಣವನ್ನು ಮೀರದ ಪ್ರಮಾಣ ಮಾಪಕಗಳಿಗೆ ಸಂಬಂಧಪಟ್ಟಂತೆ ಅಂಥ ಮಾದರಿಗಳ ಅನುಮೋದನೆಯು ಅಗತ್ಯವಿಲ್ಲದಿರಬಹುದು:

ಮತ್ತೂ ಪರಂತು, ನಿಯಮಿಸಿದ ಪ್ರಾಧಿಕಾರಿಯು ಯಾವ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕದ ಮಾದರಿಯು ಭಾರತದ ಹೊರಗಿನ ದೇಶದಲ್ಲಿ ಅನುಮೋದಿತವಾಗಿದೆಯೋ ಆ ಯಾವುದೇ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮಾದರಿಯು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿಗದಿಪಡಿಸಿದ ಪ್ರಮಾಣಗಳಿಗೆ ಅನುರೂಪವಾಗಿದೆಯೆಂದು ಅವನಿಗೆ ಮನದಟ್ಟಾದರೆ ಅಂಥ ಮಾದರಿಯನ್ನು ಯಾವುದೇ ಪರೀಕ್ಷೆ ಮಾಡದೆಯೇ ಅಥವಾ ಸೂಕ್ತವೆಂದು ಅವನು ಭಾವಿಸುವಂಥ ಪರೀಕ್ಷೆ ಮಾಡಿದ ನಂತರ ಅನುಮೋದಿಸಬಹುದು.

**23. ಲೈಸೆನ್ಸು ಇಲ್ಲದೆ ತೂಕದ ಬಟ್ಟನ್ನು ಅಥವಾ ಅಳತೆ ಮಾಪಕನ್ನು ತಯಾರಿಸುವುದರ ಮೇಲೆ, ದುರಸ್ತಿ ಮಾಡುವುದರ ಮೇಲೆ ಅಥವಾ ಮಾರಾಟ ಮಾಡುವುದರ ಮೇಲೆ ನಿಷೇಧ.–** (1) ಯಾರೇ ವ್ಯಕ್ತಿಯು, (2)ನೇ ಉಪಪ್ರಕರಣದ ಮೇರೆಗೆ ನಿಯಂತ್ರಕನು ನೀಡಿದ ಲೈಸೆನ್ಸನ್ನು ಹೊಂದಿದ್ದ ಹೊರತು, ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ತಯಾರಿಸತಕ್ಕದ್ದಲ್ಲ, ದುರಸ್ತಿ ಮಾಡತಕ್ಕದ್ದಲ್ಲ ಅಥವಾ ಮಾರಾಟ ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕೆ ಇಡತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ಇಟ್ಟುಕೊಂಡಿರತಕ್ಕದ್ದಲ್ಲ:

ಪರಂತು, ಅದನ್ನು ಯಾವ ರಾಜ್ಯದಲ್ಲಿ ತಯಾರಿಸಲಾಗುತ್ತದೆಯೋ ಆ ರಾಜ್ಯದ ಹೊರತಾಗಿ ಬೇರೆ ರಾಜ್ಯದಲ್ಲಿ ತಯಾರಕನು ತನ್ನದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ದುರಸ್ತಿ ಮಾಡುವುದಕ್ಕಾಗಿ ಆ ತಯಾರಕನಿಗೆ ಯಾವುದೇ ಲೈಸೆನ್ಸಿನ ಅಗತ್ಯ ಇರತಕ್ಕದ್ದಲ್ಲ.

(2) ಉಪಪ್ರಕರಣ (1)ರ ಉದ್ದೇಶಕ್ಕಾಗಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಅಂಥ ಷರತ್ತುಗಳ ಮೇಲೆ, ಅಂಥ ಅವಧಿಗೆ ಮತ್ತು ಅಂಥ ಪ್ರದೇಶ ವ್ಯಾಪ್ತಿಯ ಪ್ರದೇಶದೊಳಗೆ ಮತ್ತು ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ನಿಯಂತ್ರಕನು ಲೈಸೆನ್ಸನ್ನು ನೀಡತಕ್ಕದ್ದು.

## ಅಧ್ಯಾಯ IV

## ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಸತ್ಯಾಪನೆ ಮತ್ತು ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮೇಲೆ ಮುದ್ರೆ ಹಾಕುವುದು

**24. ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಸತ್ಯಾಪನೆ ಮತ್ತು ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮೇಲೆ ಮುದ್ರೆ ಹಾಕುವುದು.**– (1) ಪ್ರತಿಯೊಬ್ಬ ವ್ಯಕ್ತಿಯು, ಅವನ ಸ್ವಾಧೀನದಲ್ಲಿ, ಅಭಿರಕ್ಷೆಯಲ್ಲಿ ಅಥವಾ ನಿಯಂತ್ರಣದಲ್ಲಿ ಯಾವುದೇ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಇದ್ದರೆ, ಆ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಅವನು ಯಾವುದೇ ವ್ಯವಹಾರದಲ್ಲಿ ಅಥವಾ ಸಂರಕ್ಷಣೆಯನ್ನು ಬಳಸುವಾಗ ಬಳಸುತ್ತಿದ್ದಾನೆಂಬುದನ್ನು ಅಥವಾ ಬಳಸಲು ಉದ್ದೇಶಿಸಿದ್ದಾನೆಂಬುದನ್ನು ಅಥವಾ ಬಳಸುವ ಸಂಭವವಿದೆ ಎಂಬುದನ್ನು ಸೂಚಿಸುವಂಥ ಸಂದರ್ಭಗಳಲ್ಲಿ ಅವನ ಸ್ವಾಧೀನದಲ್ಲಿರುವ ಅಂಥ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಹಾಗೆ ಬಳಸುವುದಕ್ಕೆ ಮುಂಚೆ, ನಿಯಂತ್ರಕನು ಈ ಬಗ್ಗೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿ ಮತ್ತು ಅಂಥ ವೇಳೆಗಳಲ್ಲಿ, ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಆ ವ್ಯಕ್ತಿಯು ಸತ್ಯಾಪನೆ ಮಾಡಿಸಿಕೊಳ್ಳತಕ್ಕದ್ದು.

(2) ಕೇಂದ್ರ ಸರ್ಕಾರವು, ಯಾವ ತೂಕದ ಬಟ್ಟಿನ ಮತ್ತು ಅಳತೆಯ ಮಾಪಕದ ಸತ್ಯಾಪನೆಯನ್ನು ಸರ್ಕಾರದಿಂದ ಅನುಮೋದಿತವಾದ ಪರೀಕ್ಷಾ ಕೇಂದ್ರದ ಮೂಲಕ ಮಾಡಿಸಬೇಕಾಗಿದೆಯೋ ಆ ತೂಕದ ಬಟ್ಟಿನ ಮತ್ತು ಅಳತೆ ಮಾಪಕದ ಬಗೆಗಳನ್ನು ಗೊತ್ತುಪಡಿಸಬಹುದು.

(3) ಸರ್ಕಾರದಿಂದ ಅನುಮೋದಿತವಾದ ಪರೀಕ್ಷಾ ಕೇಂದ್ರವನ್ನು, ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ, ಅಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಮತ್ತು ಅಂಥ ಫೀಜನ್ನು ಸಂದಾಯ ಮಾಡಿದ ನಂತರ ಅಧಿಸೂಚಿಸತಕ್ಕದ್ದು.

(4) ಸರ್ಕಾರದಿಂದ ಅನುಮೋದಿತವಾದ ಪರೀಕ್ಷಾ ಕೇಂದ್ರವು, ನಿಯಮಿಸಬಹುದಾದಂಥ ಅರ್ಹತೆಗಳನ್ನು ಮತ್ತು ಅನುಭವವನ್ನು ಹೊಂದಿರುವಂಥ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳತಕ್ಕದ್ದು ಅಥವಾ ತೊಡಗಿಸತಕ್ಕದ್ದು ಮತ್ತು (2)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಸತ್ಯಾಪನೆಗಾಗಿ, ಅಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಅಂಥ ಫೀಜನ್ನು ಸಂಗ್ರಹಿಸತಕ್ಕದ್ದು.

## ಅಧ್ಯಾಯ V

## ಅಪರಾಧಗಳು ಮತ್ತು ದಂಡನೆಗಳು

**25. ಪ್ರಮಾಣವಲ್ಲದ ತೂಕದ ಬಟ್ಟುಗಳನ್ನು ಅಥವಾ ಅಳತೆಯ ಮಾಪಕಗಳನ್ನು ಬಳಕೆ ಮಾಡಿದ್ದಕ್ಕಾಗಿ ದಂಡನೆ.**– ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಿದ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಪ್ರಮಾಣಗಳಿಗೆ ಅಥವಾ ಯಾವುದೇ ಸಂಖ್ಯಾಲೇಖನದ ಪ್ರಮಾಣಕ್ಕೆ ಅನುಸಾರವಾಗಿ ಇಲ್ಲದಂಥ ಬೇರೆ ರೀತಿಯ ತೂಕದ ಬಟ್ಟುಗಳನ್ನು ಅಥವಾ ಸಂದರ್ಭಾನುಸಾರ ಅಳತೆಯ ಮಾಪಕಗಳನ್ನು ಯಾರೇ ವ್ಯಕ್ತಿಯು ಬಳಸಿದರೆ ಅಥವಾ ಅಂಕಿಗಳನ್ನು ಬಳಕೆ ಮಾಡಿದರೆ ಅವನು ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೇ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಆರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**26. ತೂಕದ ಬಟ್ಟನ್ನು ಮತ್ತು ಅಳತೆಯ ಮಾಪಕವನ್ನು ವ್ಯತ್ಯಾಸಗೊಳಿಸಿದ್ದಕ್ಕಾಗಿ ದಂಡ.–** ಯಾರೇ ವ್ಯಕ್ತಿಯು, ಯಾವುದೇ ಮೂಲ ಪ್ರಮಾಣವನ್ನು, ಮೂಲದ್ದಲ್ಲದ ಪ್ರಮಾಣವನ್ನು ಅಥವಾ ಕಾರ್ಯಾರ್ಥ ಪ್ರಮಾಣವನ್ನು ಯಾವುದೇ ರೀತಿಯಲ್ಲಿ ಕೆಡಿಸಿದರೆ ಅಥವಾ ವ್ಯತ್ಯಾಸಗೊಳಿಸಿದರೆ ಅಥವಾ ಯಾರೇ ವ್ಯಕ್ತಿಯನ್ನು ವಂಚಿಸುವ ದೃಷ್ಟಿಯಿಂದ ಅಥವಾ ಸತ್ಯಾಪನೆ ಮಾಡಿದಾಗ ಅದರಲ್ಲಿ ಕಂಡುಬಂದ ಯಾವುದೇ ದೋಷವನ್ನು ಸರಿಪಡಿಸುವುದಕ್ಕಾಗಿ ಹಾಗೆ ವ್ಯತ್ಯಾಸಗೊಳಿಸಿದ್ದ ಹೊರತು, ಹಾಗೆ ಮಾಡಿದ್ದರಿಂದಾಗಿ ಯಾರೇ ವ್ಯಕ್ತಿಯು ವಂಚನೆಗೆ ಒಳಗಾಗುವ ಸಂಭವ ಇದೆ ಎನ್ನುವುದು ಗೊತ್ತಿದ್ದೂ ಅಥವಾ ಹಾಗೆ ವಂಚನೆಗೆ ಒಳಗಾಗುತ್ತಾನೆಂದು ನಂಬಲು ಕಾರಣವಿದ್ದೂ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕದ ಪ್ರಮಾಣವನ್ನು ಹೆಚ್ಚಿಸಿದರೆ ಅಥವಾ ಪ್ರಮಾಣವನ್ನು ಕಡಿಮೆ ಮಾಡಿದರೆ ಅಥವಾ ಪ್ರಮಾಣವನ್ನು ವ್ಯತ್ಯಾಸಗೊಳಿಸಿದರೆ ಅವನು, ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆ ಸಲದ ಮತ್ತು ಆ ತರುವಾಯದ ಅಪರಾಧಕ್ಕಾಗಿ ಆರು ತಿಂಗಳಿಗಿಂತ ಕಡಿಮೆಯಲ್ಲದ, ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**27. ಪ್ರಮಾಣವಲ್ಲದ ತೂಕದ ಬಟ್ಟುಗಳನ್ನು ಅಥವಾ ಅಳತೆಯ ಮಾಪಕಗಳನ್ನು ತಯಾರಿಸಿದ್ದಕ್ಕಾಗಿ ಅಥವಾ ಮಾರಾಟ ಮಾಡಿದ್ದಕ್ಕಾಗಿ ದಂಡ.–** ಯಾವ ಪ್ರತಿಯೊಬ್ಬ ವ್ಯಕ್ತಿಯು, ಯಾವ ತೂಕದ ಬಟ್ಟು ಅಥವಾ ಅಳತೆಯ ಮಾಪಕವು,–

ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಿದ ತೂಕದ ಬಟ್ಟಿನ ಅಥವಾ ಅಳತೆಯ ಪ್ರಮಾಣಗಳಿಗೆ ಅನುರೂಪವಾಗಿಲ್ಲವೊ; ಅಥವಾ

ಬಿ) ಆ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಈ ಅಧಿನಿಯಮದ ಮೇರೆಗೆ ತಯಾರಿಸುವುದಕ್ಕೆ ಅವನಿಗೆ ಅನುಮತಿ ಇದ್ದ ಹೊರತು, ಯಾವ ಆ ತೂಕದ ಬಟ್ಟು ಅಳತೆಯ ಮಾಪಕವು ಅಥವಾ ಅಂಕಿಯ ಪ್ರಮಾಣಗಳು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿರ್ದಿಷ್ಟಪಡಿಸಿದ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಅಥವಾ ಸಂಖ್ಯಾಲೇಖನಗಳಿಗೆ ಅನುರೂಪವಾಗಿಲ್ಲವೋ

–ಆ ತೂಕದ ಬಟ್ಟಿನ, ಅಳತೆಯ ಮಾಪಕದ ಅಥವಾ ಸಂಖ್ಯಾಲೇಖನದ ಮೇಲೆ ಯಾವುದೇ ಕೆತ್ತಿದ ಬರಹ ಇರುವ ಆ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಆ ಪ್ರತಿಯೊಬ್ಬ ವ್ಯಕ್ತಿಯು ತಯಾರಿಸಿದರೆ ಅಥವಾ ತಯಾರಿಸುವಂತೆ ಮಾಡಿದರೆ ಅಥವಾ ಮಾರಾಟ ಮಾಡಿದರೆ ಅಥವಾ ಮಾರಾಟಕ್ಕಾಗಿ ಇಟ್ಟರೆ, ಪ್ರದರ್ಶಿಸಿದರೆ ಅಥವಾ ಮಾರಾಟಕ್ಕಾಗಿ ಇಟ್ಟುಕೊಂಡಿದ್ದರೆ, ಅವನು ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**28. ನಿಯಮಿಸಿದ ಪ್ರಮಾಣಗಳನ್ನು ಉಲ್ಲಂಘಿಸಿ ಯಾವುದೇ ವಹಿವಾಟು ಮಾಡಿದ್ದಕ್ಕಾಗಿ, ವ್ಯವಹಾರ ಮಾಡಿದ್ದಕ್ಕಾಗಿ ಅಥವಾ ಕರಾರು ಮಾಡಿಕೊಂಡಿದ್ದಕ್ಕಾಗಿ ದಂಡ.–** ಯಾರೇ ವ್ಯಕ್ತಿಯು, 10ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ತೂಕದ ಬಟ್ಟುಗಳ ಮತ್ತು ಅಳತೆಯ ಮಾಪಕಗಳ ಪ್ರಮಾಣಗಳನ್ನು ಉಲ್ಲಂಘಿಸಿ ಯಾವುದೇ ವಹಿವಾಟನ್ನು, ವ್ಯವಹಾರವನ್ನು ಮಾಡಿದರೆ ಅಥವಾ ಕರಾರನ್ನು ಮಾಡಿಕೊಂಡರೆ, ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**29. ಪ್ರಮಾಣವಲ್ಲದ ಯೂನಿಟ್‌ಗಳನ್ನು ನಮೂದಿಸುವುದು ಅಥವಾ ಪ್ರಕಟಿಸುವುದು ಇತ್ಯಾದಿಗಳಿಗೆ ದಂಡ.–** ಯಾರೇ ವ್ಯಕ್ತಿಯು, 11ನೇ ಪ್ರಕರಣವನ್ನು ಉಲ್ಲಂಘಿಸಿದರೆ ಅವನು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**30. ತೂಕದ ಬಟ್ಟುಗಳ ಅಥವಾ ಅಳತೆಯ ಮಾಪಕಗಳ ಪ್ರಮಾಣಗಳನ್ನು ಉಲ್ಲಂಘಿಸಿ ವ್ಯವಹಾರಗಳನ್ನು ಮಾಡಿದ್ದಕ್ಕಾಗಿ ದಂಡ.–** (ಎ) ಯಾರೇ ವ್ಯಕ್ತಿಯು ತೂಕ ಮಾಡಿ, ಅಳತೆ ಮಾಡಿ ಅಥವಾ ಅಂಕಿಗಳನ್ನು ಹಾಕಿ ಯಾವುದೇ ವಸ್ತುವನ್ನು ಅಥವಾ ಪದಾರ್ಥವನ್ನು ಮಾರಾಟ ಮಾಡುತ್ತಿದ್ದರೆ ಅಥವಾ ಆ ವಸ್ತುವಿನ ಅಥವಾ ಪದಾರ್ಥದ ಯಾವುದೇ ಪರಿಮಾಣದ

ಅಥವಾ ಎಷ್ಟೇ ಸಂಖ್ಯೆಯ ಯಾವ ವಸ್ತುವಿಗಾಗಿ ಅಥವಾ ಯಾವ ಪದಾರ್ಥಕ್ಕಾಗಿ ಕರಾರು ಮಾಡಿಕೊಳ್ಳಲಾಗಿತ್ತೋ ಅಥವಾ ಹಣ ಸಂದಾಯ ಮಾಡಲಾಗಿತ್ತೋ ಆ ಪರಿಮಾಣಕ್ಕಿಂತ ಕಡಿಮೆಯಾದ ಅಥವಾ ಅಷ್ಟು ಸಂಖ್ಯೆಗಿಂತ ಕಡಿಮೆಯಾದ ಆ ವಸ್ತುವನ್ನು ಅಥವಾ ಆ ಪದಾರ್ಥವನ್ನು ಖರೀದಿದಾರರಿಗೆ ತಲುಪಿಸಿದರೆ ಅಥವಾ ತಲುಪಿಸುವಂತೆ ಮಾಡಿದರೆ; ಅಥವಾ

(ಬಿ) ತೂಕ ಮಾಡಿ, ಅಳತೆ ಮಾಡಿ ಅಥವಾ ಅಂಕಿ ಹಾಕಿ ಯಾವುದೇ ಸೇವೆಯನ್ನು ಸಲ್ಲಿಸುತ್ತಿದ್ದರೆ ಯಾವ ಆ ಸೇವೆಗಾಗಿ ಕರಾರು ಮಾಡಿಕೊಳ್ಳಲಾಗಿದೆಯೋ ಅಥವಾ ಹಣ ಸಂದಾಯ ಮಾಡಿಲಾಗಿದೆಯೋ ಅದಕ್ಕಿಂತಲೂ ಕಡಿಮೆ ಸೇವೆಯನ್ನು ಸಲ್ಲಿಸಿದರೆ; ಅಥವಾ

(ಸಿ) ತೂಕದ ಪ್ರಕಾರ ಅಥವಾ ಅಳತೆಯ ಪ್ರಕಾರ ಅಥವಾ ಅಂಕಿ ಪ್ರಕಾರ ಯಾವುದೇ ವಸ್ತುವನ್ನು ಅಥವಾ ಪದಾರ್ಥವನ್ನು ಕೊಂಡುಕೊಳ್ಳುವಾಗ, ಯಾವ ವಸ್ತುವಿಗಾಗಿ ಅಥವಾ ಪದಾರ್ಥಕ್ಕಾಗಿ ಕರಾರು ಮಾಡಿಕೊಳ್ಳಲಾಗಿತ್ತೋ ಅಥವಾ ಹಣ ಸಂದಾಯ ಮಾಡಲಾಗಿತ್ತೋ ಆ ವಸ್ತುವನ್ನು ಅಥವಾ ಪದಾರ್ಥವನ್ನು, ಕರಾರು ಮಾಡಿಕೊಂಡಿದ್ದ ಪರಿಮಾಣಕ್ಕಿಂತ ಅಥವಾ ಹಣ ಸಂದಾಯ ಮಾಡಿದ್ದಕ್ಕಿಂತ ಹೆಚ್ಚಿನ ಪರಿಮಾಣದಲ್ಲಿ ಅಥವಾ ಹೆಚ್ಚು ಸಂಖ್ಯೆಯಲ್ಲಿ ಆ ವಸ್ತುವನ್ನು ಅಥವಾ ಪದಾರ್ಥವನ್ನು ಮೋಸದಿಂದ ಸ್ವೀಕರಿಸಿದರೆ ಅಥವಾ ಹಾಗೆ ಸ್ವೀಕರಿಸುವಂತೆ ಮಾಡಿದರೆ; ಅಥವಾ

(ಡಿ) ತೂಕದ ಪ್ರಕಾರ, ಅಳತೆಯ ಪ್ರಕಾರ ಅಥವಾ ಅಂಕಿ ಪ್ರಕಾರ ಯಾವುದೇ ಸೇವೆಯನ್ನು ಪಡೆದುಕೊಳ್ಳುವಾಗ, ಯಾವ ಸೇವೆಗಾಗಿ ಕರಾರು ಮಾಡಿಕೊಳ್ಳಲಾಗಿತ್ತೋ ಅಥವಾ ಹಣ ಸಂದಾಯ ಮಾಡಲಾಗಿತ್ತೋ ಆ ಸೇವೆಯನ್ನು ಕರಾರು ಮಾಡಿಕೊಂಡದ್ದಕ್ಕಿಂತ ಅಥವಾ ಹಣ ಸಂದಾಯ ಮಾಡಿದ್ದಕ್ಕಿಂತ ಹೆಚ್ಚಿಗೆಯಾಗಿ ಪಡೆದುಕೊಂಡರೆ

– ಅವನು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಮತ್ತು ಆ ತರುವಾಯದ ಅಪರಾಧಕ್ಕಾಗಿ, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**31. ದಸ್ತಾವೇಜು ಇತ್ಯಾದಿಗಳನ್ನು ಹಾಜರುಪಡಿಸದಿರುವುದಕ್ಕಾಗಿ ದಂಡನೆ.–** ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ಅಗತ್ಯಪಡಿಸಲಾದ ವಿವರಪಟ್ಟಿಕೆಗಳನ್ನು ಸಲ್ಲಿಸಬೇಕೆಂದು, ಯಾವುದೇ ದಾಖಲೆಯನ್ನು ಅಥವಾ ರಿಜಿಸ್ಟರನ್ನು ಇಡಬೇಕೆಂದು ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಲಾಗಿದ್ದು ಅಥವಾ ನಿರ್ದೇಶಕನು, ನಿಯಂತ್ರಕನು ಅಥವಾ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಅಥವಾ ಯಾವುದೇ ದಸ್ತಾವೇಜನ್ನು, ರಿಜಿಸ್ಟರನ್ನು ಅಥವಾ ಅದಕ್ಕೆ ಸಂಬಂಧಿಸಿದ ಇತರ ದಾಖಲೆಯನ್ನು ತಪಾಸಣೆಗಾಗಿ ತನ್ನ ಮುಂದೆ ಹಾಜರುಪಡಿಸಬೇಕೆಂದು ಅಗತ್ಯಪಡಿಸಿದರೆ, ಆ ವ್ಯಕ್ತಿಯು ಯಾವುದೇ ಸೂಕ್ತ ಕಾರಣವಿಲ್ಲದೆ ಅವುಗಳನ್ನು ಸಲ್ಲಿಸಲು ಅಥವಾ ಹಾಜರುಪಡಿಸಲು ತಪ್ಪಿದರೆ ಅಥವಾ ವಿಫಲನಾದರೆ, ಅವನು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೇ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಹಾಗೂ ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**32. ಮಾದರಿಯನ್ನು ಅನುಮೋದಿಸಿಕೊಳ್ಳಲು ವಿಫಲನಾಗಿದ್ದಕ್ಕಾಗಿ ದಂಡನೆ.–** ಯಾರೇ ವ್ಯಕ್ತಿಯು, ಯಾವುದೇ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮಾದರಿಯನ್ನು ಅನುಮೋದನೆಗಾಗಿ ಸಲ್ಲಿಸಲು ವಿಫಲನಾದರೆ ಅಥವಾ ತಪ್ಪಿದರೆ ಅವನು ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**33. ಸತ್ಯಾಪನೆ ಮಾಡಿರದ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಬಳಸಿದ್ದಕ್ಕಾಗಿ ದಂಡನೆ.–** ಯಾರೇ ವ್ಯಕ್ತಿಯು, ಸತ್ಯಾಪನೆ ಮಾಡಿರದ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಮಾರಾಟ ಮಾಡಿದರೆ, ವಿತರಣೆ ಮಾಡಿದರೆ, ತಲುಪಿಸಿದರೆ ಅಥವಾ ಅನ್ಯಥಾ ವರ್ಗಾವಣೆ ಮಾಡಿದರೆ ಅಥವಾ ಬಳಸಿದರೆ ಅವನು, ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು

ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**34. ಪ್ರಮಾಣವಲ್ಲದ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಬಳಸಿ ಸರಕು ಸಾಮಗ್ರಿ ಇತ್ಯಾದಿಗಳನ್ನು ಮಾರಾಟ ಮಾಡಿದ್ದಕ್ಕಾಗಿ ಅಥವಾ ತಲುಪಿಸಿದ್ದಕ್ಕಾಗಿ ದಂಡನೆ.–** ಯಾರೇ ವ್ಯಕ್ತಿಯು, ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಪ್ರಮಾಣಗಳಲ್ಲದ ಅಥವಾ ಅಂಕಿಯ ಪ್ರಮಾಣವಲ್ಲದ ಇತರೆ ಯಾವುದೇ ಸಾಧನದ ಮೂಲಕ ಯಾವುದೇ ಸರಕು ಸಾಮಗ್ರಿಗಳನ್ನು, ವಸ್ತುವನ್ನು ಅಥವಾ ಪದಾರ್ಥವನ್ನು ಮಾರಾಟ ಮಾಡಿದರೆ ಅಥವಾ ಮಾರಾಟ ಮಾಡಿಸಿದರೆ, ತಲುಪಿಸಿದರೆ ಅಥವಾ ತಲುಪಿಸುವಂತೆ ಮಾಡಿದರೆ ಅವನು, ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಮೂರು ತಿಂಗಳಿಗೆ ಕಡಿಮೆಯಲ್ಲದ, ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**35. ಪ್ರಮಾಣವಲ್ಲದ ತೂಕದ ಬಟ್ಟಿನಿಂದ, ಅಳತೆಯ ಮಾಪಕದಿಂದ ಅಥವಾ ಅಂಕಿ ಪ್ರಮಾಣದಿಂದ ಸೇವೆ ಸಲ್ಲಿಸಿದ್ದಕ್ಕಾಗಿ ದಂಡನೆ.–** ತೂಕದ ಬಟ್ಟು ಅಲ್ಲದ ಅಥವಾ ಅಳತೆ ಮಾಪಕವಲ್ಲದ ಅಥವಾ ಸಂಖ್ಯಾಲೇಖ ಇರದ ವಿಧಾನದಿಂದ ಪ್ರಮಾಣ ತೂಕದ ಬಟ್ಟು ಅಲ್ಲದ ಅಥವಾ ಅಳತೆ ಮಾಪಕವಲ್ಲದ ಯಾವುದೇ ತೂಕದ ಬಟ್ಟಿನಿಂದ ಅಥವಾ ಅಳತೆಯ ಮಾನಕದಿಂದ ಅಥವಾ ಅಂಕಿ ಪ್ರಮಾಣದಿಂದ ಯಾವುದೇ ಸೇವೆ ಸಲ್ಲಿಸಿದರೆ ಅಥವಾ ಸಲ್ಲಿಸುವಂತೆ ಮಾಡಿದರೆ ಅವನು, ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಮೂರು ತಿಂಗಳಿಗೆ ಕಡಿಮೆಯಲ್ಲದ ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**36. ಪ್ರಮಾಣವಲ್ಲದ ಪ್ಯಾಕೇಜುಗಳನ್ನು ಮಾರಾಟ ಮಾಡುವುದು ಇತ್ಯಾದಿಗಾಗಿ ದಂಡನೆ.–**(1) ಈ ಅಧಿನಿಯಮದಲ್ಲಿ ಹೇಳಿರುವಂತೆ ಪ್ಯಾಕೇಜಿನ ಮೇಲೆ ಇರಬೇಕಾದ ಘೋಷಣೆಗಳಿಗೆ ಅನುಗುಣವಾಗಿರದ, ಮುಂಚಿತವಾಗಿಯೇ ಪ್ಯಾಕ್ ಮಾಡಿರುವ ಯಾವುದೇ ಸರಕನ್ನು ಯಾರೇ ವ್ಯಕ್ತಿಯು ತಯಾರಿಸಿದರೆ, ಪ್ಯಾಕ್ ಮಾಡಿದರೆ, ಆಮದು ಮಾಡಿಕೊಂಡರೆ, ಮಾರಾಟ ಮಾಡಿದರೆ, ವಿತರಣೆ ಮಾಡಿದರೆ ಅಥವಾ ಅನ್ಯಥಾ ವರ್ಗಾಯಿಸಿದರೆ, ಮಾರಾಟಕ್ಕಾಗಿ ಇಟ್ಟಿದ್ದರೆ, ಪ್ರದರ್ಶಿಸಿದರೆ ಅಥವಾ ಮಾರಾಟಕ್ಕಾಗಿ ಇಟ್ಟುಕೊಂಡಿದ್ದರೆ ಅಥವಾ ಮಾರಾಟ ಮಾಡಿಸಿದರೆ, ವಿತರಣೆ ಮಾಡಿಸಿದರೆ, ತಲುಪಿಸಿದರೆ ಅಥವಾ ಅನ್ಯಥಾ ವರ್ಗಾವಣೆ ಮಾಡಿಸಿದರೆ, ಮಾರಾಟಕ್ಕಾಗಿ ಇಡಿಸಿದರೆ, ಪ್ರದರ್ಶಿಸಿದರೆ, ಅವನು ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ, ಎರಡನೆಯ ಸಲದ ಅಪರಾಧಕ್ಕಾಗಿ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಆ ತರುವಾಯದ ಅಪರಾಧಕ್ಕಾಗಿ, ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಲ್ಲದ ಆದರೆ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು ನಿಯಮಿಸಬಹುದಾದಂಥ ನಿವ್ವಳ ಪರಿಮಾಣದ ಬದಲಾಗಿ, ತಪ್ಪಿನಿಂದಾಗಿ, ಮುಂಚಿತವಾಗಿಯೇ ಪ್ಯಾಕ್ ಮಾಡಿರುವ ಯಾವುದೇ ಸರಕನ್ನು ತಯಾರಿಸಿದರೆ ಅಥವಾ ಪ್ಯಾಕು ಮಾಡಿದರೆ ಅಥವಾ ಆಮದು ಮಾಡಿಸಿಕೊಂಡರೆ ಅಥವಾ ತಯಾರಿಸುವಂತೆ ಮಾಡಿದರೆ ಅಥವಾ ಪ್ಯಾಕ್ ಮಾಡಿಸಿದರೆ ಅಥವಾ ಆಮದು ಮಾಡಿಸಿಕೊಂಡರೆ ಅವನು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಅಥವಾ ಎರಡನೇ ಸಲದ ಮತ್ತು ಆ ತರುವಾಯದ ಅಪರಾಧಕ್ಕಾಗಿ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**37. ಸರ್ಕಾರದಿಂದ ಅನುಮೋದಿತವಾದ ಪರೀಕ್ಷಾ ಕೇಂದ್ರದಿಂದ ಆದ ಉಲ್ಲಂಘನೆಗಾಗಿ ದಂಡನೆ.–** (1) ಸರ್ಕಾರದಿಂದ ಅನುಮೋದಿತವಾದ ಯಾವುದೇ ಪರೀಕ್ಷಾ ಕೇಂದ್ರವು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ

ಯಾವುದೇ ಉಪಬಂಧಗಳನ್ನು ಅಥವಾ ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘನೆ ಮಾಡಿದರೆ ಆ ಕೇಂದ್ರವು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತವಾಗತಕ್ಕದ್ದು.

(2) ಸರ್ಕಾರದಿಂದ ಅನುಮೋದಿತವಾದ ಪರೀಕ್ಷಾ ಕೇಂದ್ರದ ಯಾರೇ ಮಾಲೀಕನು ಅಥವಾ ನೌಕರನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಉದ್ದೇಶಪೂರ್ವಕವಾಗಿ ಯಾವುದೇ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಸತ್ಯಾಪನೆ ಮಾಡಿದರೆ ಅಥವಾ ಮುದ್ರೆ ಹಾಕಿದರೆ, ಆತನು ಅಂಥ ಪ್ರತಿಯೊಂದು ಉಲ್ಲಂಘನೆಗೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**38. ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಆಮದುದಾರನು ನೋಂದಣಿ ಮಾಡಿಸದೇ ಇರುವುದಕ್ಕಾಗಿ ದಂಡನೆ.**- ಈ ಅಧಿನಿಯಮದ ಮೇರೆಗೆ ನೋಂದಣಿ ಮಾಡಿಕೊಳ್ಳದೆ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಆಮದು ಮಾಡಿಕೊಂಡ ಯಾರೇ ವ್ಯಕ್ತಿಯು, ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಆರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**39. ಪ್ರಮಾಣವಲ್ಲದ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಆಮದು ಮಾಡಿಕೊಂಡಿದ್ದಕ್ಕಾಗಿ ದಂಡನೆ.**– ಪ್ರಮಾಣವಲ್ಲದ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಆಮದು ಮಾಡಿಕೊಂಡ ಯಾರೇ ವ್ಯಕ್ತಿಯು, ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**40. ನಿರ್ದೇಶಕನಿಗೆ, ನಿಯಂತ್ರಕನಿಗೆ ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಗೆ ಅಡ್ಡಿ ಅಡಚಣೆ ಉಂಟುಮಾಡಿದ್ದಕ್ಕಾಗಿ ದಂಡನೆ.**– ನಿರ್ದೇಶಕನಿಗೆ, ನಿಯಂತ್ರಕನಿಗೆ ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಗೆ, ಆತನ ಅಧಿಕಾರಗಳನ್ನು ಚಲಾಯಿಸದಂತೆ ಮಾಡುವ ಉದ್ದೇಶದಿಂದ ಅಥವಾ ಆತನ ಪ್ರಕಾರ್ಯಗಳನ್ನು ನಿರ್ವಹಿಸದಂತೆ ಮಾಡುವ ಉದ್ದೇಶದಿಂದ ಅಥವಾ ಆ ನಿರ್ದೇಶಕನು ಅಥವಾ ನಿಯಂತ್ರಕನು ಅಥವಾ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ತನ್ನ ಅಧಿಕಾರಗಳನ್ನು ಕಾನೂನುಬದ್ಧವಾಗಿ ಚಲಾಯಿಸುವಾಗ ಅಥವಾ ಅಂಥ ತನ್ನ ಪ್ರಕಾರ್ಯಗಳನ್ನು ಹಾಗೆ ನಿರ್ವಹಿಸುವಾಗ ಆ ನಿರ್ದೇಶಕನು ಅಥವಾ ನಿಯಂತ್ರಕನು ಅಥವಾ ಯಾವುದೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, ಯಾವುದೇ ಕಾರ್ಯವನ್ನು ಮಾಡಿದ ಅಥವಾ ಮಾಡಲು ಪ್ರಯತ್ನಿಸಿದ ಪರಿಣಾಮವಾಗಿ, ಆತನ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಅಥವಾ ನಿರ್ವಹಿಸುವುದಕ್ಕೆ ಅಡ್ಡಿ ಅಡಚಣೆ ಉಂಟುಮಾಡುವ ಅಥವಾ ತಡೆಯುವ ಯಾರೇ ವ್ಯಕ್ತಿಯು ಅಥವಾ ನಿರ್ದೇಶಕನು ಅಥವಾ ನಿಯಂತ್ರಕನು ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ದಸ್ತಾವೇಜನ್ನು ಅಥವಾ ದಾಖಲೆಯನ್ನು ಅಥವಾ ಯಾವುದೇ ಪ್ಯಾಕು ಮಾಡಿದ ಸರಕಿನಲ್ಲಿರುವ ನಿವ್ವಳ ವಸ್ತುಗಳನ್ನು ಪರಿಶೀಲಿಸಲು ಮತ್ತು ಸತ್ಯಾಪನೆ ಮಾಡಲು ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ ಯಾವುದೇ ಆವರಣದೊಳಗೆ ಪ್ರವೇಶಿಸುವುದಕ್ಕೆ ಅಡ್ಡಿ ಅಡಚಣೆ ಉಂಟುಮಾಡಿದರೆ ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದ ಶಿಕ್ಷೆಯಿಂದ ಮತ್ತು ಎರಡನೇ ಸಲದ ಅಥವಾ ಆ ತರುವಾಯದ ಅಪರಾಧಕ್ಕೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

**41. ಸುಳ್ಳು ಮಾಹಿತಿ ಅಥವಾ ಸುಳ್ಳು ವಿವರ ಪಟ್ಟಿಕೆಗಳನ್ನು ನೀಡಿದ್ದಕ್ಕಾಗಿ ದಂಡನೆ.**– (1) ಯಾರೇ ವ್ಯಕ್ತಿಯು, ನಿರ್ದೇಶಕ, ನಿಯಂತ್ರಕ ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ತನ್ನ ಕರ್ತವ್ಯ ನಿರ್ವಹಿಸುವಾಗ ಅಗತ್ಯಪಡಿಸಿದ ಅಥವಾ ಕೇಳಲಾದ ಮಾಹಿತಿಯನ್ನು ಅಂಥ ವ್ಯಕ್ತಿಗೆ ಆ ಮಾಹಿತಿಯು ಸುಳ್ಳೆಂದು ಗೊತ್ತಿರುವುದೋ ಅಥವಾ ಸುಳ್ಳೆಂದು ನಂಬಲು ಕಾರಣ ಇದೆಯೋ ಆ ಯಾವುದೇ ಮಾಹಿತಿಯನ್ನು ಕೊಟ್ಟರೆ ಅವನು, ಐದು ಸಾವಿರ ರೂಪಾಯಿಗಳವರೆಗೆ

ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡನೇ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಆರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

(2) ಯಾವ ವ್ಯಕ್ತಿಯನ್ನು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ವಿವರ ಪಟ್ಟಿಕೆಯನ್ನು ಅಥವಾ ದಾಖಲೆಯನ್ನು ಅಥವಾ ರಿಜಿಸ್ಟರನ್ನು ಇಡಲು ಅಗತ್ಯಪಡಿಸಲಾಗಿದ್ದು, ಆ ಯಾರೇ ವ್ಯಕ್ತಿಯು ಮುಖ್ಯ ವಿವರಗಳಲ್ಲಿ ಸುಳ್ಳಾಗಿರುವಂಥ ಯಾವುದೇ ವಿವರಪಟ್ಟಿಕೆಯನ್ನು ಸಲ್ಲಿಸಿದ್ದರೆ, ಅಥವಾ ಅಂಥ ಯಾವುದೇ ದಾಖಲೆಯನ್ನು ಅಥವಾ ರಿಜಿಸ್ಟರನ್ನು ಇಟ್ಟಿದ್ದರೆ ಅವನು, ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೇ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಹಾಗೂ ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**42. ಕಿರುಕುಳಕಾರಿ ಶೋಧನೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಅಧಿಕಾರಗಳನ್ನು ಚಲಾಯಿಸುವ ನಿರ್ದೇಶಕನು, ನಿಯಂತ್ರಕನು ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು–

(ಎ) ಯಾವುದೇ ಮನೆಯನ್ನು, ವಾಹನವನ್ನು ಅಥವಾ ಸ್ಥಳವನ್ನು ಯಾವ ಸಮಂಜಸ ಕಾರಣಗಳು ಇಲ್ಲವೆಂದು ಗೊತ್ತಿದ್ದರೂ ಶೋಧಿಸಿದರೆ ಅಥವಾ ಶೋಧಿಸುವಂತೆ ಮಾಡಿದರೆ; ಅಥವಾ

(ಬಿ) ಯಾವ ಸಮಂಜಸದ ಕಾರಣಗಳು ಇಲ್ಲವೆಂದು ಗೊತ್ತಿದ್ದರೂ ಯಾರೇ ವ್ಯಕ್ತಿಯನ್ನು ಶೋಧಿಸಿದರೆ; ಅಥವಾ

(ಸಿ) ಯಾವುದೇ ತೂಕದ ಬಟ್ಟನ್ನು, ಅಳತೆಯ ಮಾಪಕವನ್ನು ಅಥವಾ ಇತರ ಚರ ಸ್ವತ್ತನ್ನು ಯಾವ ಸಮಂಜಸದ ಕಾರಣಗಳು ಇಲ್ಲವೆಂದು ಗೊತ್ತಿದ್ದರೂ ವಶಪಡಿಸಿಕೊಂಡರೆ

– ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಆ ನಿರ್ದೇಶಕನು, ನಿಯಂತ್ರಕನು ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**43. ಅಧಿನಿಯಮವನ್ನು ಮತ್ತು ನಿಯಮಗಳನ್ನು ಉಲ್ಲಂಘಿಸಿ ಸತ್ಯಾಪನೆ ಮಾಡಿದ್ದಕ್ಕಾಗಿ ದಂಡನೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಅಧಿಕಾರಗಳನ್ನು ಚಲಾಯಿಸುವ ನಿಯಂತ್ರಕನು ಅಥವಾ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, ಈ ಅಧಿನಿಯಮವನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳನ್ನು ಉಲ್ಲಂಘಿಸಿ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಉದ್ದೇಶಪೂರ್ವಕವಾಗಿ ಸತ್ಯಾಪನೆ ಮಾಡಿದರೆ ಅಥವಾ ಮುದ್ರೆ ಹಾಕಿದರೆ ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**44. ಖೋಟಾ ಮೊಹರು ಇತ್ಯಾದಿಗಳ ತಯಾರಿಕೆಗಾಗಿ ದಂಡನೆ.–** (1) ಯಾರೇ ವ್ಯಕ್ತಿಯು–

(i) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ನಿರ್ದಿಷ್ಟಪಡಿಸಿದ ಯಾವುದೇ ಮೊಹರಿನ ಬದಲಿಗೆ ಯಾವುದೇ ಖೋಟಾ ಮೊಹರನ್ನು ತಯಾರಿಸಿದರೆ; ಅಥವಾ

(ii) ತಯಾರಿಸಿದ ಯಾವುದೇ ಖೋಟಾ ಮೊಹರನ್ನು ಮಾರಾಟ ಮಾಡಿದರೆ ಅಥವಾ ಅನ್ಯಥಾ ವಿಲೆ ಮಾಡಿದರೆ; ಅಥವಾ

(iii) ತಯಾರಿಸಿದ ಯಾವುದೇ ಖೋಟಾ ಮೊಹರನ್ನು ತನ್ನ ಬಳಿ ಇಟ್ಟುಕೊಂಡಿದ್ದರೆ; ಅಥವಾ

(iv) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ನಿರ್ದಿಷ್ಟಪಡಿಸಿದ ಯಾವುದೇ ಮುದ್ರೆಯ ಬದಲಿಗೆ ಖೋಟಾ ಮುದ್ರೆಯನ್ನು

ತಯಾರಿಸಿದರೆ, ಹಾಕಿರುವ ಯಾವುದೇ ಮುದ್ರೆಯನ್ನು ತೆಗೆದು ಹಾಕಿದರೆ ಅಥವಾ ಹಾಕಿರುವ ಯಾವುದೇ ಮುದ್ರೆಯನ್ನು ವಿರೂಪಗೊಳಿಸಿದರೆ; ಅಥವಾ

(v) ಹಾಗೆ ತೆಗೆದುಹಾಕಿದ ಮುದ್ರೆಯನ್ನು ಯಾವುದೇ ಇತರ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಒತ್ತಿದರೆ ಅಥವಾ ಆ ಮುದ್ರೆಯನ್ನು ಯಾವುದೇ ಇತರ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಸೇರಿಸಿದರೆ ಆಗ ಆರು ತಿಂಗಳುಗಳಿಗಿಂತ ಕಡಿಮೆಯಲ್ಲದ ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಆರು ತಿಂಗಳಿಗೆ ಕಡಿಮೆಯಲ್ಲದ, ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

**ವಿವರಣೆ.–** ಈ ಉಪಪ್ರಕರಣದಲ್ಲಿ **"ಖೋಟಾ ತಯಾರಿಕೆ"** ಪದಕ್ಕೆ ಭಾರತ ದಂಡ ಸಂಹಿತೆ (1860 ರ 45)ಯ 28ನೇ ಪ್ರಕರಣದಲ್ಲಿ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

(2) ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಿದ ಯಾವುದೇ ಮೊಹರನ್ನು ಕಾನೂನುಬಾಹಿರ ವಿಧಾನಗಳಿಂದ ಪಡೆದರೆ ಅಥವಾ ಬಳಸಿದರೆ ಮತ್ತು ಅಂಥ ಯಾವುದೇ ಮೊಹರನ್ನು, ಅಂಥ ಮೊಹರಿನಿಂದ ಮಾಡಿದ ಯಾವುದೇ ಮುದ್ರೆಯನ್ನು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ಅಧಿಕೃತವಾದುದ್ದೆಂದು ತೋರಿಸುವ ಉದ್ದೇಶದಿಂದ ಯಾವುದೇ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮೇಲೆ ಯಾವುದೇ ಮುದ್ರೆಯನ್ನು ಹಾಕುವುದಕ್ಕಾಗಿ ಯಾವುದೇ ಅಂಥ ಮೊಹರನ್ನು ಬಳಸಿದರೆ ಅಥವಾ ಬಳಸುವಂತೆ ಮಾಡಿದರೆ ಅವನು, ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

(3) ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೂಲಕ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ಅಥವಾ ಅಂಥ ನಿಯಮಗಳ ಮೇರೆಗೆ ನಿರ್ದಿಷ್ಟಪಡಿಸಿದ ಮೊಹರನ್ನು ಕಾನೂನುಸಮ್ಮತವಾಗಿ ಸ್ವಾಧೀನದಲ್ಲಿಟ್ಟುಕೊಂಡಿದ್ದು, ಅಂಥ ಮೊಹರನ್ನು ಯಾವುದೇ ಕಾನೂನುಸಮ್ಮತ ಅಧಿಕಾರವಿಲ್ಲದೆ ಬಳಸಿದರೆ ಅಥವಾ ಬಳಸುವಂತೆ ಮಾಡಿದರೆ ಅವನು, ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಐದು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

(4) ಯಾರೇ ವ್ಯಕ್ತಿಯು, ಯಾವ ತೂಕದ ಬಟ್ಟಿನ ಅಥವಾ ಅಳತೆ ಮಾಪಕದ ಮೇಲೆ ಖೋಟಾ ತಯಾರಿಕೆ ಮುದ್ರೆ ಇದೆ ಎಂಬುದು ಆತನಿಗೆ ಗೊತ್ತಿದೆಯೋ ಅಥವಾ ಹಾಗೆ ನಂಬಲು ಕಾರಣ ಇದೆಯೋ ಆ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಮಾರಾಟ ಮಾಡಿದರೆ ಅಥವಾ ಮಾರಾಟಕ್ಕಾಗಿ ಇಟ್ಟರೆ ಅಥವಾ ಪ್ರದರ್ಶಿಸಿದರೆ ಅಥವಾ ಅನ್ಯಥಾ ವಿಲೆ ಮಾಡಿದರೆ ಅವನು ಆರು ತಿಂಗಳುಗಳಿಗಿಂತ ಕಡಿಮೆಯಲ್ಲದ ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡನೆ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಆರು ತಿಂಗಳುಗಳಿಗಿಂತ ಕಡಿಮೆಯಲ್ಲದ ಆದರೆ ಐದು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

**45. ಲೈಸೆನ್ಸು ಇಲ್ಲದೆ ತೂಕದ ಬಟ್ಟನ್ನು ಮತ್ತು ಅಳತೆ ಮಾಪಕವನ್ನು ತಯಾರಿಸಿದ್ದಕ್ಕಾಗಿ ದಂಡನೆ.–** ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಲೈಸೆನ್ಸನ್ನು ಪಡೆದುಕೊಳ್ಳಬೇಕಾಗಿರುವ ಯಾರೇ ವ್ಯಕ್ತಿಯು, ಸಿಂಧುವಾದ ಲೈಸೆನ್ಸು ಇಲ್ಲದೆಯೇ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆ ಮಾಪಕನ್ನು ತಯಾರಿಸಿದರೆ ಅವನು ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ

ತರುವಾಯದ ಅಪರಾಧಕ್ಕಾಗಿ, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**46. ಲೈಸೆನ್ಸಿಲ್ಲದೆ ತೂಕದ ಬಟ್ಟಿನ ಮತ್ತು ಅಳತೆ ಮಾಪಕದ ದುರಸ್ತಿ, ಮಾರಾಟ ಇತ್ಯಾದಿಗಳಿಗೆ ದಂಡನೆ.–** ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಲೈಸೆನ್ಸನ್ನು ಪಡೆಯಬೇಕಾದ ಯಾರೇ ವ್ಯಕ್ತಿಯು, ಸಿಂಧುವಾದ ಲೈಸೆನ್ಸ್ ಇಲ್ಲದೆಯೆ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ದುರಸ್ತಿ ಮಾಡಿದರೆ ಅಥವಾ ಮಾರಾಟಕ್ಕೆ ಇಟ್ಟರೆ ಅಥವಾ ಪ್ರದರ್ಶಿಸಿದರೆ ಮಾರಾಟಕ್ಕಾಗಿ ಇಟ್ಟುಕೊಂಡಿದ್ದರೆ ಅವನು, ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**47. ಲೈಸೆನ್ಸನ್ನು ತಿದ್ದಿದ್ದಕ್ಕೆ ದಂಡನೆ.–** ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ನೀಡಿರುವ ಅಥವಾ ನವೀಕರಿಸಿರುವ ಯಾವುದೇ ಲೈಸೆನ್ಸನ್ನು, ನಿಯಂತ್ರಕನು ಆ ಲೈಸೆನ್ಸಿನಲ್ಲಿ ಬದಲಾವಣೆ ಮಾಡುವುದಕ್ಕೆ ಅಥವಾ ಲೈಸೆನ್ಸನ್ನು ಅನ್ಯಥಾ ತಿದ್ದುವುದಕ್ಕೆ ಕೊಟ್ಟಿರುವ ಯಾವುದೇ ಅಧಿಕಾರ ಪತ್ರದ ಅನುಸಾರವಾಗಿ ಅಲ್ಲದೆ, ಲೈಸೆನ್ಸನ್ನು ಬದಲಾವಣೆ ಮಾಡಿದರೆ ಅಥವಾ ಅನ್ಯಥಾ ತಿದ್ದಿದರೆ ಅವನು, ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**48. ಅಪರಾಧಗಳನ್ನು ರಾಜಿ ಮಾಡಿಕೊಳ್ಳುವುದು.–** (1) 25ನೇ ಪ್ರಕರಣದ, 27ನೇ ಪ್ರಕರಣದಿಂದ 39ನೇ ಪ್ರಕರಣದವರೆಗಿನ ಪ್ರಕರಣಗಳ, 45 ರಿಂದ 47ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ ಅಥವಾ 52ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು, ಪ್ರಾಸಿಕ್ಯೂಷನ್ನನ್ನು ಹೂಡುವುದಕ್ಕೂ ಮೊದಲೇ ಅಥವಾ ಆ ತರುವಾಯ, ನಿಯಮಿಸಬಹುದಾದಂಥ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡುವ ಸಲುವಾಗಿ ಸಂದಾಯ ಮಾಡಿದ ಮೇಲೆ ರಾಜಿ ಮಾಡಿಕೊಳ್ಳಬಹುದು.

(2) ನಿರ್ದೇಶಕನು ಅಥವಾ ಅಪರಾಧಗಳನ್ನು ರಾಜಿ ಮಾಡಿಕೊಳ್ಳಲು ನಿರ್ದೇಶಕನಿಂದ ವಿಶೇಷವಾಗಿ ಅಧಿಕಾರವನ್ನು ಪಡೆದುಕೊಂಡಿರಬಹುದಾದ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, 25ನೇ ಪ್ರಕರಣದ, 27 ರಿಂದ 39ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ ಅಥವಾ 52ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ದಂಡನೀಯವಾದ ಅಪರಾಧಗಳನ್ನು ರಾಜಿ ಮಾಡಿಕೊಳ್ಳಬಹುದು.

(3) ನಿಯಂತ್ರಕನು ಅಥವಾ ನಿಯಂತ್ರಕನಿಂದ ವಿಶೇಷವಾಗಿ ಅಧಿಕಾರ ಪಡೆದುಕೊಂಡಿರಬಹುದಾದ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು 25ನೇ ಪ್ರಕರಣದ, 27 ರಿಂದ 31ನೇ ಪ್ರಕರಣಗಳವರೆಗಿನ ಪ್ರಕರಣಗಳ, 33 ರಿಂದ 37ನೇ ಪ್ರಕರಣಗಳವರೆಗಿನ ಪ್ರಕರಣಗಳ, 45 ರಿಂದ 47ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ ಮತ್ತು 52ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ದಂಡನೀಯವಾದ ಅಪರಾಧಗಳನ್ನು ರಾಜಿ ಮಾಡಿಕೊಳ್ಳಬಹುದು:

ಪರಂತು, ಅಂಥ ಮೊತ್ತವು, ಹಾಗೆ ರಾಜಿ ಮಾಡಿಕೊಂಡಿದ್ದ ಅಪರಾಧಕ್ಕಾಗಿ ಈ ಅಧಿನಿಯಮದ ಮೇರೆಗೆ ಯಾವ ಗರಿಷ್ಠ ಮೊತ್ತದ ಜುಲ್ಮಾನೆಯನ್ನು ವಿಧಿಸಬಹುದಾಗಿತ್ತೋ ಆ ಗರಿಷ್ಠ ಮೊತ್ತವು, ಯಾವುದೇ ಸಂದರ್ಭದಲ್ಲೂ ಮೀರತಕ್ಕದ್ದಲ್ಲ.

(4) ಯಾವ ವ್ಯಕ್ತಿಯು ಮೊದಲನೆಯ ಸಲ ಅಪರಾಧವನ್ನು ಎಸಗಿದ್ದನೋ, ಆ ಮೊದಲನೆಯ ಸಲ ಮಾಡಿದ ಅಪರಾಧದ ಬಗ್ಗೆ ಯಾವ ದಿನಾಂಕದಂದು ರಾಜಿ ಮಾಡಿಕೊಂಡಿದ್ದನೋ ಆ ದಿನಾಂಕದಿಂದ, ಮೂರು ವರ್ಷಗಳ ಅವಧಿಯೊಳಗೆ ಅದೇ ಅಪರಾಧವನ್ನು ಅಥವಾ ಅದೇ ರೀತಿಯ ಅಪರಾಧವನ್ನು ಎಸಗಿದರೆ (1)ನೇ ಉಪಪ್ರಕರಣದಲ್ಲಿರುವುದು ಯಾವುದೂ ಆ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

**ವಿವರಣೆ.–** ಯಾವ ಅಪರಾಧಕ್ಕಾಗಿ ಈ ಹಿಂದೆ ಯಾವ ದಿನಾಂಕದಂದು ರಾಜಿ ಮಾಡಿಕೊಳ್ಳಲಾಗಿತ್ತೋ ಆ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಗಿದ ತರುವಾಯ ಎರಡನೆಯ ಸಲ ಮಾಡಿದ ಅಥವಾ ಆ

ತರುವಾಯವೂ ಮಾಡಿದ ಯಾವುದೇ ಅಪರಾಧವನ್ನು ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಮೊದಲನೆಯ ಸಲ ಮಾಡಿದ ಅಪರಾಧವೆಂದೇ ಭಾವಿಸತಕ್ಕದ್ದು.

(5) ಉಪಪ್ರಕರಣ (1)ರ ಮೇರೆಗೆ ಅಪರಾಧವನ್ನು ರಾಜಿ ಮಾಡಿಕೊಂಡಿದ್ದರೆ ಹಾಗೆ ರಾಜಿ ಮಾಡಿಕೊಂಡ ಅಪರಾಧಕ್ಕೆ ಸಂಬಂಧಪಟ್ಟಂತೆ ಅಪರಾಧಿಯ ವಿರುದ್ಧ ಸಂದರ್ಭಾನುಸಾರ ಯಾವುದೇ ವ್ಯವಹರಣೆಯನ್ನು ಅಥವಾ ಇನ್ನೂ ಹೆಚ್ಚಿನ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

(6) ಈ ಅಧಿನಿಯಮದ ಮೇರೆಗಿನ ಯಾವ ಅಪರಾಧವನ್ನು ಈ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಹೊರತು, ರಾಜಿ ಮಾಡಿಕೊಳ್ಳತಕ್ಕದ್ದಲ್ಲ.

**49. ಕಂಪನಿಗಳಿಂದ ಅಪರಾಧಗಳು ಮತ್ತು ಅಪರಾಧಿಯೆಂದು ನಿರ್ಣೀತವಾಗಿರುವ ಕಂಪನಿಗಳ ಹೆಸರು, ವ್ಯವಹಾರದ ಸ್ಥಳ ಇತ್ಯಾದಿಗಳನ್ನು ಪ್ರಕಟಿಸಲು ನ್ಯಾಯಾಲಯಕ್ಕೆ ಇರುವ ಅಧಿಕಾರ.**- (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದ್ದರೆ,-

ಎ) (i) ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಯ ಪ್ರಭಾರದಲ್ಲಿರಲು ಯಾವ ವ್ಯಕ್ತಿಯನ್ನು (2)ನೇ ಉಪಪ್ರಕರಣದ ಮೇರೆಗೆ ನಾಮನಿರ್ದೇಶನ ಮಾಡಲಾಗಿದೆಯೋ ಮತ್ತು ಕಂಪನಿಯ ವ್ಯವಹಾರವನ್ನು ನಡೆಸಲು ಕಂಪನಿಗೆ ಯಾವ ವ್ಯಕ್ತಿಯು ಜವಾಬ್ದಾರನಾಗಿರುವನೋ ಅಂಥ ವ್ಯಕ್ತಿ ಯಾರಾದರೂ ಇದ್ದರೆ, ಅವನನ್ನು (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಜವಾಬ್ದಾರನಾಗಿರುವ ವ್ಯಕ್ತಿ ಎಂಬುದಾಗಿ ಉಲ್ಲೇಖಿಸಲಾಗಿದೆ); ಅಥವಾ

(ii) ಅಂಥ ಯಾವ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಿರದಿದ್ದರೆ ಅಪರಾಧವನ್ನು ಮಾಡಿದ ಕಾಲದಲ್ಲಿ ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯನ್ನು; ಮತ್ತು

(ಬಿ) ಕಂಪನಿಯನ್ನು

- ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಆ ವ್ಯಕ್ತಿಯು, ಆ ಕಂಪನಿಯು ವ್ಯವಹರಣೆಗಳಿಗೆ ಒಳಗಾಗಲು ಮತ್ತು ತದನುಸಾರವಾಗಿ ಶಿಕ್ಷೆಗೆ ಒಳಗಾಗಲು ಬದ್ಧವಾಗಿರತಕ್ಕದ್ದು:

ಪರಂತು, ಅಂಥ ಯಾರೇ ವ್ಯಕ್ತಿಯು ಆ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಮತ್ತು ಅಂಥ ಅಪರಾಧವು ನಡೆಯುವುದನ್ನು ತಡೆಯಲು ತಾನು ಎಲ್ಲ ರೀತಿಯ ಸೂಕ್ತ ಎಚ್ಚರಿಕೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ಅಂಥ ಯಾರೇ ವ್ಯಕ್ತಿಯನ್ನು, ಈ ಅಧಿನಿಯಮದಲ್ಲಿ ಉಪಬಂಧಿಸಿರುವ ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡದಂತೆ ತಡೆಯಲು ಅವಶ್ಯಕವಾಗಬಹುದಾದಂಥ ಅಥವಾ ವಿಹಿತವಾದಂಥ ಎಲ್ಲ ಅಧಿಕಾರಗಳನ್ನು ಚಲಾಯಿಸಲು ಮತ್ತು ಅಂಥ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲು ಯಾವುದೇ ಕಂಪನಿಯು ಲಿಖಿತ ಆದೇಶದ ಮೂಲಕ, ತನ್ನ ನಿರ್ದೇಶಕರಲ್ಲಿ ಯಾರೇ ನಿರ್ದೇಶಕನನ್ನು ಅಧಿಕೃತಗೊಳಿಸಬಹುದು ಮತ್ತು ಜವಾಬ್ದಾರನಾಗಿರುವ ವ್ಯಕ್ತಿ ಎಂದೇ ಕಂಪನಿಯು ಅಂಥ ನಿರ್ದೇಶಕನನ್ನು ನಾಮನಿರ್ದೇಶನ ಮಾಡಲು ಆ ನಿರ್ದೇಶಕನ ಲಿಖಿತ ಒಪ್ಪಿಗೆ ಪಡೆದೇ ಕಂಪನಿಯ ನಾಮನಿರ್ದೇಶನ ಮಾಡಿದೆ ಎಂದು ನಿರ್ದೇಶಕನಿಗೆ ಅಥವಾ ಸಂಬಂಧಪಟ್ಟ ನಿಯಂತ್ರಕನಿಗೆ ಅಥವಾ ಅಂಥ ನಿಯಂತ್ರಕನು ಯಾವ ಕಾನೂನು ಮಾಪನ ವಿಜ್ಞಾನ ಅಧಿಕಾರಿಗೆ ಈ ಸಂಬಂಧವಾಗಿ ಅಧಿಕಾರ ಕೊಟ್ಟಿರುವನೋ (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಅಧಿಕೃತ ಅಧಿಕಾರಿ ಎಂಬುದಾಗಿ ಉಲ್ಲೇಖಿಸಲಾಗಿದೆ) ಆ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ನೋಟೀಸು ಕೊಡಬಹುದು.

**ವಿವರಣೆ.**- ಕಂಪನಿಯು, ಯಾವುದೇ ಕಾರ್ಯಸಂಸ್ಥೆಯಲ್ಲಿ ಅಥವಾ ಶಾಖೆಯಲ್ಲಿ ಬೇರೆಬೇರೆ ಸಂಸ್ಥೆಗಳನ್ನು ಅಥವಾ ಶಾಖೆಗಳನ್ನು ಅಥವಾ ಬೇರೆಬೇರೆ ಘಟಕಗಳನ್ನು ಹೊಂದಿದ್ದರೆ, ಅಂಥ ಬೇರೆಬೇರೆ ಕಾರ್ಯಸಂಸ್ಥೆಗಳಿಗೆ ಅಥವಾ ಶಾಖೆಗಳಿಗೆ ಅಥವಾ ಘಟಕಗಳಿಗೆ ಸಂಬಂಧಪಟ್ಟಂತೆ ಈ ಉಪಪ್ರಕರಣದ ಮೇರೆಗೆ ಬೇರೆ ಬೇರೆ ವ್ಯಕ್ತಿಗಳನ್ನು ನಾಮನಿರ್ದೇಶನ

ಮಾಡಬಹುದು ಮತ್ತು ಯಾವುದೇ ಕಾರ್ಯಸಂಸ್ಥೆಗೆ, ಶಾಖೆಗೆ, ಅಥವಾ ಘಟಕಕ್ಕೆ ಸಂಬಂಧಪಟ್ಟಂತೆ, ನಾಮನಿರ್ದೇಶನ ಮಾಡಿದ ವ್ಯಕ್ತಿಯನ್ನು ಅಂಥ ಕಾರ್ಯಸಂಸ್ಥೆಗೆ, ಶಾಖೆಗೆ ಅಥವಾ ಘಟಕಕ್ಕೆ ಜವಾಬ್ದಾರನಾದ ವ್ಯಕ್ತಿ ಎಂಬುದಾಗಿ ಭಾವಿಸತಕ್ಕದ್ದು.

(3) ಉಪಪ್ರಕರಣ (2)ರ ಮೇರೆಗೆ ನಾಮನಿರ್ದೇಶನಗೊಂಡಿರುವ ವ್ಯಕ್ತಿಯು–

(i) ಅಂಥ ನಾಮನಿರ್ದೇಶನವನ್ನು ರದ್ದುಗೊಳಿಸಬೇಕೆಂಬ ತರುವಾಯದ ನೋಟೀಸನ್ನು ನಿರ್ದೇಶಕನು ಅಥವಾ ಸಂಬಂಧಪಟ್ಟ ನಿಯಂತ್ರಕನು ಅಥವಾ ಅಧಿಕೃತ ಅಧಿಕಾರಿಯು ಕಂಪನಿಯಿಂದ ಸ್ವೀಕರಿಸುವವರೆಗೆ; ಅಥವಾ

(ii) ಅವನು ಕಂಪನಿಯ ನಿರ್ದೇಶಕನಾಗಿರುವುದು ನಿಂತುಹೋಗುವವರೆಗೆ; ಅಥವಾ

(iii) ನಾಮನಿರ್ದೇಶನವನ್ನು ರದ್ದುಪಡಿಸುವಂತೆ ನಿರ್ದೇಶಕನಿಗೆ ಅಥವಾ ಸಂಬಂಧಪಟ್ಟ ನಿಯಂತ್ರಕನಿಗೆ ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಗೆ ಲಿಖಿತ ಕೋರಿಕೆಯನ್ನು, ಆ ಬಗ್ಗೆ ಕಂಪನಿಗೆ ತಿಳಿಸಿ ಸಲ್ಲಿಸುವವರೆಗೆ, ಆ ಕೋರಿಕೆಯನ್ನು ನಿರ್ದೇಶಕನು ಅಥವಾ ಸಂಬಂಧಪಟ್ಟ ನಿಯಂತ್ರಕನು ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ವಿಲೆ ಮಾಡುವವರೆಗೆ

– ಇವುಗಳಲ್ಲಿ ಯಾವುದು ಮೊಟ್ಟಮೊದಲಿನದೋ ಆವರೆಗೆ ಜವಾಬ್ದಾರನಾಗಿರುವ ವ್ಯಕ್ತಿಯಾಗಿರುವುದು ಮುಂದುವರೆಯತಕ್ಕದ್ದು:

ಪರಂತು, ಅಂಥ ವ್ಯಕ್ತಿಯು ಆ ಕಂಪನಿಯ ನಿರ್ದೇಶಕನಾಗಿರುವುದು ನಿಂತು ಹೋಗಿದ್ದರೆ ಆತನು ಹಾಗೆ ನಿರ್ದೇಶಕನಾಗಿರುವುದು ನಿಂತು ಹೋಗಿರುವ ಸಂಗತಿಯನ್ನು ನಿರ್ದೇಶಕನಿಗೆ ಅಥವಾ ಸಂಬಂಧಪಟ್ಟ ನಿಯಂತ್ರಕನಿಗೆ ಅಥವಾ ಅಧಿಕೃತ ಅಧಿಕಾರಿಗೆ ತಿಳಿಸತಕ್ಕದ್ದು:

ಮತ್ತೂ ಪರಂತು, (iii) ನೇ ಖಂಡದ ಮೇರೆಗೆ ಅಂಥ ವ್ಯಕ್ತಿಯು ಕೋರಿಕೆಯನ್ನು ಸಲ್ಲಿಸಿದಾಗ ನಿರ್ದೇಶಕನು ಅಥವಾ ಸಂಬಂಧಪಟ್ಟ ನಿಯಂತ್ರಕನು ಅಥವಾ ಅಧಿಕೃತ ಅಧಿಕಾರಿಯು ಅಂಥ ನಾಮನಿರ್ದೇಶನವನ್ನು, ಆ ಕೋರಿಕೆಯನ್ನು ಯಾವ ದಿನಾಂಕದಂದು ಸಲ್ಲಿಸಲಾಗಿತ್ತೋ ಆ ದಿನಾಂಕಕ್ಕಿಂತ ಮುಂಚಿನ ದಿನಾಂಕದಿಂದ ಜಾರಿಗೆ ಬರುವಂತೆ ರದ್ದುಗೊಳಿಸತಕ್ಕದ್ದಲ್ಲ.

(4) ಮೇಲೆ ಹೇಳಿರುವ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದರೆ ಮತ್ತು ಆ ಅಪರಾಧವು, (2)ನೇ ಉಪಪ್ರಕರಣದ ಮೇರೆಗೆ ನಾಮನಿರ್ದೇಶನಗೊಂಡಿರುವ ವ್ಯಕ್ತಿ ಆಗಿರದ, ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ (2)ನೇ ಉಪಪ್ರಕರಣದ ಮೇರೆಗೆ ನಾಮನಿರ್ದೇಶನಗೊಂಡಿರುವ ವ್ಯಕ್ತಿ ಆಗಿರದ, ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ನಿರ್ಲಕ್ಷ್ಯದಿಂದ ನಡೆಯಿತೆಂದು ಆರೋಪಿಸಿರುವುದು ರುಜುವಾತಾದರೆ ಅಂಥ ನಿರ್ದೇಶಕನು, ವ್ಯವಸ್ಥಾಪಕನು, ಕಾರ್ಯದರ್ಶಿಯು ಅಥವಾ ಇತರ ಅಧಿಕಾರಿಯು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಒಳಗಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

(5) ಈ ಅಧಿನಿಯಮದ ಉಪಬಂಧಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿದ್ದಕ್ಕಾಗಿ ಈ ಅಧಿನಿಯಮದ ಮೇರೆಗೆ ಯಾವುದೇ ಕಂಪನಿಯು ಅಪರಾಧಿಯೆಂದು ನಿರ್ಣಯ ಆಗಿದ್ದರೆ ಆಗ, ಕಂಪನಿಯನ್ನು ಅಪರಾಧಿಯೆಂದು ನಿರ್ಣಯಿಸುವ ನ್ಯಾಯಾಲಯಕ್ಕೆ ಕಂಪನಿಯ ಹೆಸರನ್ನು ಕಂಪನಿಯ ವ್ಯವಹಾರದ ಸ್ಥಳವನ್ನು ಉಲ್ಲಂಘನೆಯ ಸ್ವರೂಪವನ್ನು, ಕಂಪನಿಯನ್ನು ಅಪರಾಧಿಯೆಂದು ನಿರ್ಣಯಿಸಲಾಗಿದೆ ಎಂಬ ಸಂಗತಿಯನ್ನು ಮತ್ತು ಮೊಕದ್ದಮೆಯ ಸಂದರ್ಭ ಸನ್ನಿವೇಶಗಳಲ್ಲಿ ಸಮುಚಿತವೆಂದು ನ್ಯಾಯಾಲಯವು ಭಾವಿಸಬಹುದಾದಂತಹ ಇತರ ವಿವರಗಳನ್ನು, ನ್ಯಾಯಾಲಯವು ನಿರ್ದೇಶಿಸಬಹುದಾದಂತಹ ವೃತ್ತಪತ್ರಿಕೆಯಲ್ಲಿ ಅಥವಾ ಅಂಥ ಇತರ ಯಾವುದೇ ರೀತಿಯಲ್ಲಿ ಕಂಪನಿಯ ವೆಚ್ಚದಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು.

(6) ನ್ಯಾಯಾಲಯದ ಆದೇಶಗಳ ವಿರುದ್ಧ ಅಪೀಲನ್ನು ಸಲ್ಲಿಸಲು ಇರುವ ಅವಧಿಯು, ಆ ಅವಧಿಯಲ್ಲಿ ಯಾವುದೇ ಅಪೀಲನ್ನು ಸಲ್ಲಿಸದೆ ಇದ್ದರೂ, ಆ ತನಕ ಅಥವಾ ಅಂಥ ಅಪೀಲನ್ನು ಸಲ್ಲಿಸಿದಾಗ ಅದನ್ನು ವಿಲೆ ಮಾಡುವ ತನಕ (5)ನೇ ಉಪಪ್ರಕರಣದ ಮೇರೆಗೆ ಯಾವುದೇ ಪ್ರಕಟಣೆಯನ್ನು ಮಾಡತಕ್ಕದ್ದಲ್ಲ.

(7) ಉಪಪ್ರಕರಣ (5)ರ ಮೇರೆಗೆ ಪ್ರಕಟಣೆಗಾಗಿ ಮಾಡಿದ ಯಾವುದೇ ವೆಚ್ಚಗಳನ್ನು, ನ್ಯಾಯಾಲಯವು ವಿಧಿಸಿದ ಜುಲ್ಮಾನೆಯನ್ನು ಹೇಗೆ ವಸೂಲಿ ಮಾಡಲಾಗುತ್ತಿತ್ತೋ ಹಾಗೆಯೇ ಕಂಪನಿಯಿಂದ ವಸೂಲು ಮಾಡತಕ್ಕದ್ದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) **"ಕಂಪನಿ"** ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ **"ನಿರ್ದೇಶಕ"** ಎಂದರೆ ಫರ್ಮಿನ ಪಾಲುದಾರ, ಆದರೆ ಇದು ನಾಮನಿರ್ದೇಶಿತ ನಿರ್ದೇಶಕರುಗಳನ್ನು, ಗೌರವ ನಿರ್ದೇಶಕರುಗಳನ್ನು ಸರ್ಕಾರವು ನಾಮನಿರ್ದೇಶನ ಮಾಡಿದ ನಿರ್ದೇಶಕರುಗಳನ್ನು ಒಳಗೊಳ್ಳುವುದಿಲ್ಲ.

**50. ಅಪೀಲುಗಳು.**– (1) ಉಪಪ್ರಕರಣ (2)ರ ಉಪಬಂಧಗಳಿಗೊಳಪಟ್ಟು, ಅಪೀಲನ್ನು ಎಂದರೆ,–

(ಎ) 13ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು 15 ರಿಂದ 20ನೇ ಪ್ರಕರಣಗಳ ಮೇರೆಗೆ, 22 ರಿಂದ 25ನೇ ಪ್ರಕರಣಗಳ ಮೇರೆಗೆ, 27ನೇ ಪ್ರಕರಣದಿಂದ 39ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ, 41ನೇ ಪ್ರಕರಣದ ಅಥವಾ 52ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಕೈಗೊಂಡ ಪ್ರತಿಯೊಂದು ತೀರ್ಮಾನದ ಬಗ್ಗೆ ಅಥವಾ ಮಾಡಿದ ಆದೇಶದ ಬಗ್ಗೆ ನಿರ್ದೇಶಕನಿಗೆ;

(ಬಿ) 15ನೇ ಪ್ರಕರಣದಿಂದ 20ನೇ ಪ್ರಕರಣಗಳ ಮೇರೆಗೆ, 22ನೇ ಪ್ರಕರಣದಿಂದ 25ನೇ ಪ್ರಕರಣಗಳ ಮೇರೆಗೆ, 27 ರಿಂದ 39ನೇ ಪ್ರಕರಣಗಳ ಮೇರೆಗೆ, 41ನೇ ಪ್ರಕರಣದ ಮೇರೆಗೆ, ಅಥವಾ 52ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಕಾನೂನು ಮಾಪನ ವಿಜ್ಞಾನ ನಿರ್ದೇಶಕನು ಕೈಗೊಂಡ ಪ್ರತಿಯೊಂದು ತೀರ್ಮಾನದ ಮೇಲೆ ಅಥವಾ ಮಾಡಿದ ಆದೇಶದ ಮೇಲೆ ಕೇಂದ್ರ ಸರ್ಕಾರಕ್ಕೆ ಅಥವಾ ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ವಿಶೇಷವಾಗಿ ಅಧಿಕೃತಗೊಳಿಸಿರುವ ಯಾರೇ ಅಧಿಕಾರಿಗೆ;

(ಸಿ) ಕಾನೂನು ಮಾಪನ ವಿಜ್ಞಾನ ನಿರ್ದೇಶಕನು ಪ್ರತ್ಯಾಯೋಜಿಸಿದ ಅಧಿಕಾರಗಳ ಮೇರೆಗೆ ಕಾನೂನು ಮಾಪನ ವಿಜ್ಞಾನ ನಿಯಂತ್ರಕನು ನೀಡಿದ ಪ್ರತಿಯೊಂದು ತೀರ್ಮಾನದ ಮೇಲೆ ಕೇಂದ್ರ ಸರ್ಕಾರಕ್ಕೆ;

(ಡಿ) 15 ರಿಂದ 18ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ, 23 ರಿಂದ 25ನೇ ಪ್ರಕರಣಗಳ ಮೇರೆಗೆ, 27 ರಿಂದ 37ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ, 45 ರಿಂದ 47ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ ಅಥವಾ 53ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ 14ನೇ ಪ್ರಕರಣದ ಮೇರೆಗೆ, ನೇಮಕಗೊಂಡ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ನೀಡಿದ ಪ್ರತಿಯೊಂದು ತೀರ್ಮಾನದ ಮೇಲೆ ಅಥವಾ ಮಾಡಿದ ಆದೇಶದ ಮೇಲೆ ನಿಯಂತ್ರಕನಿಗೆ; ಮತ್ತು

(ಇ) 15 ರಿಂದ 18ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ, 23 ರಿಂದ 25ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ, 27 ರಿಂದ 37ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ, 45 ರಿಂದ 47ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ ರಚಿಸಿದ ಅಥವಾ 53ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ, (ಡಿ) ಖಂಡದ ಮೇರೆಗೆ ಸಲ್ಲಿಸಿದ ಅಪೀಲಿನಲ್ಲಿ ಮಾಡಿದ ಆದೇಶ ಅಲ್ಲದ, ನಿಯಂತ್ರಕನು ನೀಡಿದ ಪ್ರತಿಯೊಂದು ತೀರ್ಮಾನದ ಮೇಲೆ ಅಥವಾ ಮಾಡಿದ ಆದೇಶದ ಮೇಲೆ ರಾಜ್ಯ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ವಿಶೇಷವಾಗಿ ಅಧಿಕೃತಗೊಳಿಸಿದ ಯಾರೇ ಅಧಿಕಾರಿಗೆ

– ಅಪೀಲನ್ನು ಸಲ್ಲಿಸಲು ಅವಕಾಶ ಇರತಕ್ಕದ್ದು.

(2) ಆಕ್ಷೇಪಿಸಿರುವ ಆದೇಶವನ್ನು ಯಾವ ದಿನಾಂಕದಂದು ಮಾಡಲಾಗಿತ್ತೋ ಆ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಅಂಥ ಪ್ರತಿಯೊಂದು ಅಪೀಲನ್ನು ಸಲ್ಲಿಸತಕ್ಕದ್ದು:

ಪರಂತು, ಸದರಿ ಅರವತ್ತು ದಿನಗಳ ಅವಧಿಯೊಳಗೆ ಅಪೀಲುದಾರನು ಸಾಕಷ್ಟು ಕಾರಣದಿಂದಾಗಿ ಅಪೀಲನ್ನು ಸಲ್ಲಿಸಲು ಆಗಿರಲಿಲ್ಲ ಎಂಬುದು ಅಪೀಲು ಪ್ರಾಧಿಕಾರಕ್ಕೆ ಮನವರಿಕೆಯಾದರೆ, ಮತ್ತೆ ಅರವತ್ತು ದಿನಗಳ ಅವಧಿಯೊಳಗೆ ಅಪೀಲುದಾರನು ಅಪೀಲನ್ನು ಸಲ್ಲಿಸಲು ಅನುಮತಿ ನೀಡಬಹುದು.

(3) ಯಾವುದೇ ಅಂಥ ಅಪೀಲನ್ನು ಸ್ವೀಕರಿಸಿದ ಮೇಲೆ, ಅಪೀಲು ಪ್ರಾಧಿಕಾರವು ಅಪೀಲಿನ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ನಂತರ ಮತ್ತು ಸಮರ್ಪಕವೆಂದು ಪ್ರಾಧಿಕಾರವು ಭಾವಿಸುವಂತಹ ವಿಚಾರಣೆಯನ್ನು ಮಾಡಿದ ನಂತರ, ಕೈಗೊಂಡ ಯಾವ ತೀರ್ಮಾನದ ಮೇಲೆ ಅಥವಾ ಮಾಡಿದ ಯಾವ ಆದೇಶದ ಮೇಲೆ ಅಪೀಲು ಸಲ್ಲಿಸಲಾಗಿದೆಯೋ ಅಂಥ ತೀರ್ಮಾನವನ್ನು ಅಥವಾ ಆದೇಶವನ್ನು ಸ್ಥಿರೀಕರಿಸಿರುವ, ಮಾರ್ಪಾಟು ಮಾಡಿರುವ ಅಥವಾ ವ್ಯತಿರಿಕ್ತಗೊಳಿಸಿರುವ, ಸೂಕ್ತವೆಂದು ತಾನು ಭಾವಿಸುವಂತಹ ಆದೇಶವನ್ನು ಮಾಡಬಹುದು ಅಥವಾ ಅವಶ್ಯವಿದ್ದರೆ ಇನ್ನು ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಂಡ ನಂತರ ಹೊಸದಾಗಿ ತೀರ್ಮಾನ ಕೈಗೊಳ್ಳುವುದಕ್ಕಾಗಿ ಅಥವಾ ಆದೇಶವನ್ನು ಮಾಡುವುದಕ್ಕಾಗಿ ಸೂಕ್ತವೆಂದು ತಾನು ಭಾವಿಸುವಂತಹ ನಿರ್ದೇಶನ ನೀಡಿ ಈ ಪ್ರಕರಣವನ್ನು ವಾಪಸ್ಸು ಕಳುಹಿಸಬಹುದು.

(4) ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಪ್ರತಿಯೊಂದು ಅಪೀಲನ್ನು ಸಲ್ಲಿಸತಕ್ಕದ್ದು.

(5) ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ತಾನಾಗಿಯೇ ಅಥವಾ ಅನ್ಯಥಾ, ಯಾವ ಅಪೀಲಿನಲ್ಲಿ ಯಾವ ತೀರ್ಮಾನವನ್ನು ಕೈಗೊಳ್ಳಲಾಗಿದೆಯೋ ಅಥವಾ ಆದೇಶವನ್ನು ಮಾಡಲಾಗಿದೆಯೋ ಆ ಅಪೀಲಿನಲ್ಲಿ ಆಗಿರುವ ವ್ಯವಹರಣೆಯೂ ಸೇರಿದಂತೆ ಯಾವುದೇ ವ್ಯವಹರಣೆಯ ದಾಖಲೆಯನ್ನು, ಅಂಥ ತೀರ್ಮಾನದ ಅಥವಾ ಆದೇಶದ ಸರಿತನದ ಬಗ್ಗೆ, ಕಾನೂನು ಸಮ್ಮತತೆಯ ಬಗ್ಗೆ ಅಥವಾ ಔಚಿತ್ಯದ ಬಗ್ಗೆ ಸ್ವತಃಮನವರಿಕೆ ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಪರಿಕ್ಷೀಸಬಹುದು ಮತ್ತು ಆ ಬಗ್ಗೆ ಸೂಕ್ತವೆಂದು ತಾನು ಭಾವಿಸುವಂಥ ಆದೇಶಗಳನ್ನು ಮಾಡಬಹುದು:

ಪರಂತು, ಪ್ರಸ್ತಾವಿತ ಕ್ರಮದ ಬಗ್ಗೆ ಹೇಳಿಕೊಳ್ಳಲು ಅಂಥ ವ್ಯಕ್ತಿಗೆ ಸೂಕ್ತ ಅವಕಾಶವನ್ನು ಕೊಟ್ಟ ಹೊರತು, ಯಾರೇ ವ್ಯಕ್ತಿಗೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವ ಹಾಗೆ ಈ ಉಪಪ್ರಕರಣದ ಮೇರೆಗೆ ಯಾವುದೇ ತೀರ್ಮಾನವನ್ನು ಅಥವಾ ಆದೇಶವನ್ನು ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

**51. ಭಾರತ ದಂಡ ಸಂಹಿತೆಯ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳು ಅನ್ವಯವಾಗದಿರುವುದು.–** ಭಾರತ ದಂಡ ಸಂಹಿತೆ, 1860 (1860 ರ 45)ರ ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2) ರ 153ನೇ ಪ್ರಕರಣದ ಉಪಬಂಧಗಳು ತೂಕದ ಬಟ್ಟಿನ ಅಥವಾ ಅಳತೆಯ ಮಾಪಕಗಳಿಗೆ ಸಂಬಂಧಪಟ್ಟ ಅಪರಾಧಗಳಿಗೆ ಅಂತಹ ಉಪಬಂಧಗಳು ಎಷ್ಟರ ಮಟ್ಟಿಗೆ ಸಂಬಂಧಪಡುತ್ತವೆಯೋ ಅಷ್ಟರಮಟ್ಟಿಗೆ ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕೆ ಅನ್ವಯವಾಗತಕ್ಕದ್ದಲ್ಲ.

**52. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು ಎಂದರೆ:–

(ಎ) 5ನೇ ಪ್ರಕರಣದ ಉಪಪ್ರಕರಣ (2)ರ ಮೇರೆಗಿನ ಅಳತೆಗಳ ಬೇಸ್ ಯೂನಿಟ್‌ಗಳ ಮತ್ತು ದ್ರವ್ಯಮಾನದ ಬೇಸ್ ಯೂನಿಟ್‌ಗಳ ವಿಶಿಷ್ಟ ವಿವರಣೆ;

(ಬಿ) 7ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ವಸ್ತುಗಳನ್ನು ಮತ್ತು ಸಲಕರಣೆಗಳನ್ನು ಸಿದ್ಧಪಡಿಸುವ ರೀತಿ;

(ಸಿ) 7ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಆಕೃತಿ ಲಕ್ಷಣಗಳು, ವಿನ್ಯಾಸ, ತಯಾರಿಕಾ ವಿವರಗಳು, ಸಾಮಗ್ರಿಗಳು, ಸಲಕರಣೆಗಳು, ಕಾರ್ಯಸಾಮರ್ಥ್ಯ, ಸಹನೀಯತೆ, ಮರುಸತ್ಯಾಪನೆಯ ಅವಧಿ, ಪರೀಕ್ಷೆಗಳ ವಿಧಾನಗಳು ಅಥವಾ ಕಾರ್ಯವಿಧಾನಗಳು;

(ಡಿ) 9ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಮೂಲ ಪ್ರಮಾಣಗಳು, ಮೂಲದ್ದಲ್ಲದ ಪ್ರಮಾಣಗಳು ಮತ್ತು ಕಾರ್ಯಾರ್ಥ ಪ್ರಮಾಣಗಳು;

(ಇ) 9ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವ ಮೂಲ ಪ್ರಮಾಣಗಳನ್ನು, ಮೂಲದ್ದಲ್ಲದ ಪ್ರಮಾಣಗಳನ್ನು ಮತ್ತು ಕಾರ್ಯಾರ್ಥ ಪ್ರಮಾಣಗಳನ್ನು ಸತ್ಯಾಪನೆ ಮಾಡತಕ್ಕದ್ದೋ ಮತ್ತು ಅವುಗಳ ಮೇಲೆ ಮುದ್ರೆ ಹಾಕತಕ್ಕದ್ದೋ ಆ ಮೂಲ ಪ್ರಮಾಣಗಳು, ಮೂಲದ್ದಲ್ಲದ ಪ್ರಮಾಣಗಳು, ಕಾರ್ಯಾರ್ಥ ಪ್ರಮಾಣಗಳು ಮತ್ತು ಅದಕ್ಕಾಗಿ ಫೀಜು;

(ಎಫ್) ಯಾವುದೇ ಸರಕುಗಳ, ಸರಕುಗಳ ವರ್ಗದ ಅಥವಾ ವಾಗ್ದಾನದ ಸಂಬಂಧದಲ್ಲಿ 10ನೇ ಪ್ರಕರಣದ ಮೇರೆಗೆ ಯಾವ ತೂಕದ ಬಟ್ಟಿನಲ್ಲಿ ಅಥವಾ ಅಳತೆ ಮಾಪಕದಲ್ಲಿ ಅಥವಾ ಅಂಕಿ ಪ್ರಕಾರ ಯಾವುದೇ ವ್ಯವಹಾರವನ್ನು, ವ್ಯಾಪಾರವನ್ನು ಅಥವಾ ಕರಾರನ್ನು ಮಾಡಿಕೊಳ್ಳಬೇಕಾಗುತ್ತದೋ ಅಂಥ ತೂಕದ ಬಟ್ಟು ಅಥವಾ ಅಳತೆ ಮಾಪಕ ಅಥವಾ ಅಂಕಿ;

(ಜಿ) 13ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿರ್ದೇಶಕನ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳ ಅರ್ಹತೆಗಳು;

(ಹೆಚ್) 14ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿಯಂತ್ರಕನ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳ ಅರ್ಹತೆಗಳು;

(ಐ) 15ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸರಕುಗಳನ್ನು ವಿಲೆ ಮಾಡುವ ರೀತಿ;

(ಜೆ) 18ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ಯಾಕೇಜ್‌ಗಳಲ್ಲಿ ಎಷ್ಟು ಪ್ರಮಾಣ ಪರಿಮಾಣಗಳ ಅಥವಾ ಸಂಖ್ಯೆಯ ಸರಕುಗಳು ಇರಬೇಕೋ ಮತ್ತು ಯಾವ ರೀತಿಯಲ್ಲಿ ಪ್ಯಾಕೇಜುಗಳ ಮೇಲೆ ಘೋಷಣೆಗಳು ಮತ್ತು ವಿವರಗಳು ಇರಬೇಕೋ ಆ ನಿಗದಿತ ಪ್ರಮಾಣ ಪರಿಮಾಣ ಅಥವಾ ಸಂಖ್ಯೆ ಮತ್ತು ರೀತಿ;

(ಕೆ) 19ನೇ ಪ್ರಕರಣದ ಮೇರೆಗೆ ನೋಂದಣಿ ಮತ್ತು ನೋಂದಣಿಯ ರೀತಿ ಮತ್ತು ಫೀಜು;

(ಎಲ್) 21ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಂಸ್ಥೆಯ ಆಡಳಿತ ಮತ್ತು ನಿಯಂತ್ರಣ, ಬೋಧಕ ಸಿಬ್ಬಂದಿ ಮತ್ತು ಇತರ ನೌಕರರು, ಆ ಸಂಸ್ಥೆಯಲ್ಲಿ ತರಬೇತಿಗಾಗಿ ಇರುವ ಕೋರ್ಸುಗಳು ಮತ್ತು ಪಠ್ಯಕ್ರಮಗಳು ಆ ಸಂಸ್ಥೆಯಲ್ಲಿ ಪ್ರವೇಶ ಪಡೆಯುವುದಕ್ಕಾಗಿ ವ್ಯಕ್ತಿಗೆ ಯಾವ ಅರ್ಹತೆಗಳು ಇರಬೇಕೋ ಆ ಅರ್ಹತೆಗಳು;

(ಎಂ) 22ನೇ ಪ್ರಕರಣದ ಮೇರೆಗೆ ಮಾದರಿಗಳ ಅನುಮೋದನೆಗಾಗಿ ಇರುವ ರೀತಿ, ಫೀಜು ಮತ್ತು ಪ್ರಾಧಿಕಾರ;

(ಎನ್) 24ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ತೂಕದ ಬಟ್ಟುಗಳ ಅಥವಾ ಅಳತೆ ಮಾಪಕಗಳ ಬಗೆಗಳು;

(ಒ) 24ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ, ಯಾವ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಮತ್ತು ಎಷ್ಟು ಫೀಜನ್ನು ಸಂದಾಯ ಮಾಡಿದ ಮೇಲೆ ಕೇಂದ್ರ ಸರ್ಕಾರವು, ಸರ್ಕಾರಿ ಅನುಮೋದಿತ ಪರೀಕ್ಷಾ ಕೇಂದ್ರವನ್ನು ಅಧಿಸೂಚಿಸಬೇಕಾಗುತ್ತದೋ ಆ ರೀತಿ, ಅಂಥ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಅಷ್ಟು ಫೀಜು;

(ಪಿ) ಸರ್ಕಾರಿ ಅನುಮೋದಿತ ಪರೀಕ್ಷಾ ಕೇಂದ್ರವು ನೇಮಕ ಮಾಡಿಕೊಳ್ಳಬೇಕಾದ ಅಥವಾ ತೊಡಗಿಸಿಕೊಳ್ಳಬೇಕಾದ ವ್ಯಕ್ತಿಗಳು ಯಾವ ಅರ್ಹತೆಯನ್ನು ಮತ್ತು ಅನುಭವವನ್ನು ಹೊಂದಿರಬೇಕೋ ಆ ಅರ್ಹತೆ

ಮತ್ತು ಅನುಭವ ಮತ್ತು ಯಾವ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಫೀಜನ್ನು ಸಂದಾಯ ಮಾಡಿದ ಮೇಲೆ 24ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ತೂಕದ ಬಟ್ಟನ್ನು ಅಥವಾ ಅಳತೆ ಮಾಪಕವನ್ನು ಸತ್ಯಾಪನೆ ಮಾಡತಕ್ಕದ್ದೋ ಅಂಥ ಫೀಜು ಮತ್ತು ನಿಬಂಧನೆಗಳು ಮತ್ತು ಷರತ್ತುಗಳು;

(ಕ್ಯೂ) 36ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿವ್ವಳ ಪರಿಮಾಣದಲ್ಲಿ ಆದ ತಪ್ಪು;

(ಆರ್) 48ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಪರಾಧವನ್ನು ರಾಜಿ ಮಾಡಿಕೊಳ್ಳುವುದಕ್ಕಾಗಿ ಫೀಜು;

(ಎಸ್) ನಿರ್ದೇಶಕನಿಗೆ ಅಥವಾ ನಿಯಂತ್ರಕನಿಗೆ ಅಥವಾ ಅವನು ಅಧಿಕೃತಗೊಳಿಸಿದ ಯಾರೇ ಇತರ ಅಧಿಕಾರಿಗೆ 49ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ನೋಟೀಸನ್ನು ನೀಡತಕ್ಕದ್ದೋ ಆ ನಮೂನೆ ಮತ್ತು ಅಂಥ ರೀತಿ.

(3) ಕೇಂದ್ರ ಸರ್ಕಾರವು ಈ ಪ್ರಕರಣದ ಮೇರೆಗೆ ಯಾವುದೇ ನಿಯಮವನ್ನು ರಚಿಸುವಾಗ, ಆ ನಿಯಮದ ಉಲ್ಲಂಘನೆಯು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಉಪಬಂಧ ಕಲ್ಪಿಸಬಹುದು.

(4) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**53. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ನಡೆಸಿದ ತರುವಾಯ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 16ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ ಮೇರೆಗೆ ಯಾವ ಕಾಲದೊಳಗೆ ತೂಕದ ಬಟ್ಟನ್ನು ಅಥವಾ ಅಳತೆ ಮಾಪಕವನ್ನು ಸತ್ಯಾಪನೆ ಮಾಡಿಸಬಹುದೋ ಆ ಕಾಲ;

(ಬಿ) 17ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ತಿಳಿಸಿದ ವ್ಯಕ್ತಿಗಳು ಇಡಬೇಕಾದ ರಿಜಿಸ್ಟರುಗಳು ಮತ್ತು ದಾಖಲೆಗಳು;

(ಸಿ) 23ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸನ್ನು ನೀಡುವುದಕ್ಕಾಗಿ ಇರುವ ನಮೂನೆ, ರೀತಿ, ಷರತ್ತುಗಳು, ಅವಧಿ, ಪ್ರದೇಶ ವ್ಯಾಪ್ತಿಗೆ ಒಳಪಡುವ ಪ್ರದೇಶ ಮತ್ತು ಫೀಜು;

(ಡಿ) 24ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ತೂಕದ ಬಟ್ಟಿನ ಅಥವಾ ಅಳತೆ ಮಾಪಕದ ಸತ್ಯಾಪನೆಗಾಗಿ ಅಥವಾ ಅದರ ಮೇಲೆ ಮುದ್ರೆ ಹಾಕುವುದಕ್ಕಾಗಿ ಇರುವ ಫೀಜು;

(ಇ) 24ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ, ಸರ್ಕಾರಿ ಅನುಮೋದಿತ ಪರೀಕ್ಷಾ ಕೇಂದ್ರವನ್ನು ಅಧಿಸೂಚಿಸುವ ರೀತಿ, ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಸಂದಾಯ ಮಾಡಬೇಕಾದ ಫೀಜು;

(ಎಫ್) 48ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಪರಾಧಗಳನ್ನು ರಾಜಿ ಮಾಡಿಕೊಳ್ಳುವುದಕ್ಕಾಗಿ ಫೀಜು.

(3) ರಾಜ್ಯ ಸರ್ಕಾರವು, ಈ ಪ್ರಕರಣದ ಮೇರೆಗೆ ಯಾವುದೇ ನಿಯಮವನ್ನು ರಚಿಸುವಾಗ ಆ ನಿಯಮದ ಉಲ್ಲಂಘನೆಯು, ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಉಪಬಂಧ ಕಲ್ಪಿಸಬಹುದು.

(4) ಈ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸಲು ಇರುವ ಅಧಿಕಾರವು ರಚಿಸುತ್ತಿರುವ ಆ ನಿಯಮಗಳನ್ನು ರಾಜಪತ್ರದಲ್ಲಿ ಮುಂಚಿತವಾಗಿಯೇ ಪ್ರಕಟಿಸತಕ್ಕದ್ದೆಂಬ ಷರತ್ತಿಗೆ ಒಳಪಟ್ಟಿರತಕ್ಕದ್ದು.

(5) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಎರಡು ಸದನಗಳಿರುವ ರಾಜ್ಯದಲ್ಲಿ ಆ ರಾಜ್ಯದ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮತ್ತು ಒಂದೇ ಸದನ ಇರುವ ರಾಜ್ಯದಲ್ಲಿ ಆ ರಾಜ್ಯ ವಿಧಾನಮಂಡಲದ ಆ ಸದನದ ಮುಂದೆ ಇರಿಸತಕ್ಕದ್ದು.

**54. ಅಧಿಕಾರಗಳ ಪ್ರತ್ಯಾಯೋಜನೆ.**– (1) ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ ಮತ್ತು ಅಧಿಸೂಚನೆಯ ಮೂಲಕ, ಅಪೀಲಿಗೆ ಸಂಬಂಧಿಸಿದಂತೆ 50ನೇ ಪ್ರಕರಣದಿಂದ ಅಥವಾ ನಿಯಮಗಳನ್ನು ರಚಿಸಲು ಇರುವ ಅಧಿಕಾರಕ್ಕೆ ಸಂಬಂಧಿಸಿದ 52ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರ ಅಲ್ಲದ ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಕೇಂದ್ರ ಸರ್ಕಾರವು, ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ನಿಯಮಿಸಬಹುದಾದಂಥ ವಿಷಯಗಳಿಗೆ ಸಂಬಂಧಿಸಿದಂತೆ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ತನ್ನ ಅಧೀನ ಅಧಿಕಾರಿಯೂ ಸಹ ಚಲಾಯಿಸಬಹುದೆಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬಹುದು.

(2) ರಾಜ್ಯ ಸರ್ಕಾರದ ಯಾವುದೇ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಕ್ಕೆ ಅಥವಾ ಅದು ವಿಧಿಸಿದ ಷರತ್ತಿಗೆ ಒಳಪಟ್ಟು, ಕೇಂದ್ರ ಸರ್ಕಾರವು ಯಾವುದೇ ಅಧಿಕಾರಗಳನ್ನು ಚಲಾಯಿಸಲು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಆ ಅಧಿಕಾರಗಳನ್ನು ಅವು ಈ ಅಧಿನಿಯಮದಿಂದ ನೇರವಾಗಿ ಆ ವ್ಯಕ್ತಿಗೆ ಪ್ರದತ್ತವಾಗಿದ್ದಿದ್ದರೆ ಮತ್ತು ಪ್ರತ್ಯಾಯೋಜನೆ ಮೂಲಕ ಕೊಟ್ಟಿರದಿದ್ದರೆ, ಆ ವ್ಯಕ್ತಿಯು ಅವುಗಳನ್ನು ಯಾವ ರೀತಿಯಲ್ಲಿ ಮತ್ತು ಎಷ್ಟರಮಟ್ಟಿಗೆ ಚಲಾಯಿಸಬಹುದಿತ್ತೋ ಅದೇ ರೀತಿಯಲ್ಲಿ ಮತ್ತು ಅಷ್ಟರಮಟ್ಟಿಗೆ ಚಲಾಯಿಸಬಹುದು.

55. **ಕೆಲವು ಸಂದರ್ಭಗಳಲ್ಲಿ ಅಧಿನಿಯಮವು ಅನ್ವಯವಾಗದೇ ಇರುವುದು.**– ಈ ಅಧಿನಿಯಮದ ಉಪಬಂಧಗಳು ಅವು ತೂಕದ ಬಟ್ಟುಗಳನ್ನು ಮತ್ತು ಅಳತೆಯ ಮಾಪಕಗಳನ್ನು ಸತ್ಯಾಪನೆ ಮಾಡುವುದಕ್ಕೆ ಮತ್ತು ಅವುಗಳಿಗೆ ಮುದ್ರೆ ಹಾಕುವುದಕ್ಕೆ ಎಷ್ಟರಮಟ್ಟಿಗೆ ಸಂಬಂಧಪಡುತ್ತವೆಯೋ ಅಷ್ಟರಮಟ್ಟಿಗೆ,–

(ಎ) ಒಕ್ಕೂಟದ ಸಶಸ್ತ್ರದಳ ಬಳಕೆಗಾಗಿ, ಯಾವುದೇ ಶಸ್ತ್ರಾಸ್ತ್ರಗಳನ್ನು, ಮದ್ದುಗುಂಡುಗಳನ್ನು ಅಥವಾ ಅವೆರಡನ್ನೂ, ತಯಾರಿಸುವುದರಲ್ಲಿ ಮಾತ್ರವೇ ತೊಡಗಿರುವ ಯಾವುದೇ ಕಾರ್ಖಾನೆಯಲ್ಲಿ ಬಳಸುವ;

(ಬಿ) ವೈಜ್ಞಾನಿಕ ಪರೀಕ್ಷೆಗಾಗಿ ಅಥವಾ ಸಂಶೋಧನೆಗಾಗಿ ಬಳಸುವ;

(ಸಿ) ರಫ್ತು ಮಾಡುವುದಕ್ಕಾಗಿಯೇ ತಯಾರಿಸಿದ

– ಯಾವುದೇ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಅನ್ವಯವಾಗತಕ್ಕದ್ದಲ್ಲ.

**56. ಗೊತ್ತುಪಡಿಸುವ ಹೊಸ ಅರ್ಹತೆಯು ಹಾಲಿ ಇರುವ ನಿರ್ದೇಶಕನಿಗೆ, ನಿಯಂತ್ರಕನಿಗೆ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಗೆ ಬಾಧಿತವಾಗದಿರುವುದು.**– (1) ಯಾವುದೇ ನಿಯಮದಲ್ಲಿ ಬೇರೆಬೇರೆ ಅರ್ಹತೆಗಳನ್ನು ನಿಯಮಿಸಿದ್ದರೂ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಪ್ರಾರಂಭದ ನಿಕಟಪೂರ್ವದಲ್ಲಿ ನೇಮಕಗೊಂಡಿದ್ದ ಪ್ರತಿಯೊಬ್ಬ

ನಿರ್ದೇಶಕನನ್ನು, ನಿಯಂತ್ರಕನನ್ನು ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಯನ್ನು, 13ನೇ ಮತ್ತು 14ನೇ ಪ್ರಕರಣಗಳ (1)ನೇ ಉಪಪ್ರಕರಣದ ಮೇರೆಗೆ ನೇಮಕ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(2) ತೂಕ ಮತ್ತು ಅಳತೆಗಳ ಮಾನಕಗಳ (ಜಾರಿ) ಅಧಿನಿಯಮ, 1985 (1985 ರ 54) ರ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಯಾವ ನಿಯಮಗಳು ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದವೋ ಆ ನಿಯಮಗಳು, ಆ ಬಗ್ಗೆ ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸುವ ತನಕ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

**57. ತೂಕ ಮತ್ತು ಅಳತೆ ಮಾನಕಗಳ ಅಧಿನಿಯಮ, 1976ರ ಮತ್ತು ತೂಕಗಳ ಮತ್ತು ಅಳತೆಗಳ ಮಾನಕ (ಜಾರಿ) ಅಧಿನಿಯಮ, 1985ರ ನಿರಸನ.–** (1) ತೂಕ ಮತ್ತು ಅಳತೆ ಮಾನಕಗಳ ಅಧಿನಿಯಮ 1976 (1976 ರ 60)ನ್ನು ಮತ್ತು ತೂಕಗಳ ಮತ್ತು ಅಳತೆ ಮಾನಕಗಳ (ಜಾರಿ) ಅಧಿನಿಯಮ 1985 (1985 ರ 54)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ನಿರಸನಗಳಿಗೆ ಸಂಬಂಧಪಟ್ಟಂತೆ ಸಾಮಾನ್ಯ ಖಂಡಗಳ ಅಧಿನಿಯಮ, 1897 (1897 ರ 10)ರಲ್ಲಿ ಇರುವ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ತೂಕ ಮತ್ತು ಅಳತೆ ಮಾನಕಗಳ ಅಧಿನಿಯಮ, 1976 (1976 ರ 60) ಮತ್ತು ತೂಕ ಮತ್ತು ಅಳತೆ ಮಾನಕಗಳ (ಜಾರಿ) ಅಧಿನಿಯಮ, 1985 (1985 ರ 54)ರ ಮೇರೆಗೆ ಹೊರಡಿಸಿದ ಯಾವುದೇ ಅಧಿಸೂಚನೆಯು, ರಚಿಸಿದ ನಿಯಮವು ಅಥವಾ ಮಾಡಿದ ಆದೇಶವು ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿದ್ದರೆ ಅವು ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು ಮತ್ತು ಈ ಅಧಿನಿಯಮದ ಸಂವಾದಿ ಉಪಬಂಧದ ಮೇರೆಗೆ ಅದನ್ನು ಹೊರಡಿಸಿದ್ದಿದ್ದರೆ, ಮಾಡಿದ್ದಿದ್ದರೆ ಅಥವಾ ರಚಿಸಿದ್ದಿದ್ದರೆ ಅಥವಾ ನೀಡಿದ್ದಿದ್ದರೆ ಹೇಗೆ ಪರಿಣಾಮವನ್ನು ಹೊಂದಿರುತ್ತಿತ್ತೋ ಹಾಗೆಯೇ ಪರಿಣಾಮವನ್ನು ಹೊಂದಿರತಕ್ಕದ್ದು.

(3) ಹಾಗೆ ನಿರಸನಗೊಂಡಿದ್ದರೂ, ಅಂಥ ಕಾನೂನಿನ ಮೇರೆಗೆ ಮಾಡಿದ ಯಾವುದೇ ನೇಮಕವು, ಹೊರಡಿಸಿದ ಯಾವುದೇ ಅಧಿಸೂಚನೆಯು, ರಚಿಸಿದ ಯಾವುದೇ ನಿಯಮವು, ಹೊರಡಿಸಿದ ಯಾವುದೇ ಆದೇಶವು, ಮಾಡಿದ ಯಾವುದೇ ನೋಂದಣಿಯು, ನೀಡಿದ ಯಾವುದೇ ಲೈಸೆನ್ಸು, ಪ್ರಮಾಣಪತ್ರವು, ನೋಟೀಸು, ತೀರ್ಮಾನವು, ಅನುಮೋದನೆಯು, ಅಧಿಕಾರವು ಅಥವಾ ಸಮ್ಮತಿಯು ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿದ್ದಿದ್ದರೆ, ಅವು ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು ಮತ್ತು ಅವುಗಳನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಅದನ್ನು ಮಾಡಿದ್ದಿದ್ದರೆ, ಹೊರಡಿಸಿದ್ದಿದ್ದರೆ, ಅಥವಾ ನೀಡಿದ್ದಿದ್ದರೆ ಹೇಗೆ ಪರಿಣಾಮವನ್ನು ಹೊಂದಿರುತ್ತಿತ್ತೋ ಹಾಗೆಯೇ ಪರಿಣಾಮವನ್ನು ಹೊಂದಿರತಕ್ಕದ್ದು.